ಸಂಪುಟ 01 । ಸಂಚಿಕೆ 186 ಗುರುವಾರ 10 ಸೆಪ್ಟೆಂಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಆತ್ಮಹತ್ಯೆ ತಡೆ ದಿನ (World Suicide Prevention Day) ಆತ್ಮಹತ್ಯೆ ತಡೆಗಟ್ಟುವಿಕೆ ಮತ್ತು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ದಿನ.

2) ಜಿಬ್ರಾಲ್ಟರ್ ರಾಷ್ಟ್ರೀಯ ದಿನ ? Gibraltar National Day ಜಿಬ್ರಾಲ್ಟರ್ ರಾಷ್ಟ್ರೀಯ ದಿನವನ್ನು ಪ್ರತಿವರ್ಷ ಸೆಪ್ಟೆಂಬರ್ 10ರಂದು ಆಚರಿಸಲಾಗುತ್ತದೆ. ಇದು ಜಿಬ್ರಾಲ್ಟರ್‌ನ ಜನರ ಸ್ವಂತ ಗುರುತು, ಸಂಸ್ಕೃತಿ ಮತ್ತು ಭವಿಷ್ಯವನ್ನು ನಿರ್ಧರಿಸುವ ಹಕ್ಕನ್ನು ಗೌರವಿಸುವ ಪ್ರಮುಖ ದಿನವಾಗಿದೆ.

## ಸುಭಾಷಿತ

ಮನುಷ್ಯನು ಸತ್ತ ಮೇಲೆ ಅವನು ಮಾಡಿದ ಕೆಟ್ಟದ್ದು ಉಳಿಯುತ್ತದೆ. ಒಳ್ಳೆಯದು ಮರೆತೇ ಹೋಗುತ್ತದೆ.

–ವಿಲಿಯಂ ಷೇಕ್ಸ್‌ಪಿಯರ್

# 'ಭಾರತ್ ಜೋಡೋ ಜನಸಾಮಾನ್ಯರ ಸಂಕಷ್ಟಕ್ಕೆ ಪರಿಹಾರ':

## ಕಾಂಗ್ರೆಸ್ ಸಿದ್ಧಾಂತದೊಂದಿಗೆ ಮತ್ತೆ ಅಧಿಕಾರದ ಸಂಕಲ್ಪ – CM ಡಿ.ಕೆ. ಶಿವಕುಮಾರ್

ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಭಾರತ್ ಜೋಡೋ ಯಾತ್ರೆ; ದೇಶದ ಜನಸಾಮಾನ್ಯರ ಸಂಕಷ್ಟಕ್ಕೆ ಸಿಕ್ಕ ಪರಿಹಾರ:ನಾನು, ಹರಿಪ್ರಸಾದ್, ಸಿದ್ದರಾಮಯ್ಯ ಅವರು ಸೇರಿದಂತೆ ಕಾಂಗ್ರೆಸ್ ಪಕ್ಷದ ಸಚಿವರು ನಾಯಕರು ಎಲ್ಲರೂ ಒಟ್ಟಾಗಿ ಕಾಂಗ್ರೆಸ್ ಪಕ್ಷದ ಸಿದ್ಧಾಂತ, ಎಲ್ಲಾ ವರ್ಗವನ್ನು ಒಗ್ಗೂಡಿಸೋಣ.**

ಕಾಂಗ್ರೆಸ್ ಪಕ್ಷವನ್ನು 20 28 20 29ಕ್ಕೆಮತ್ತೆ ದೇಶದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನ ಅಧಿಕಾರಕ್ಕೆ ತರೋಣ" ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕರೆ ನೀಡಿ ಅಭಿಮತ ಭರವಸೆ ವ್ಯಕ್ತಪಡಿಸಿದರು ಭಾರತ್ ಜೋಡೋ ಯಾತ್ರೆ ದೇಶದ ಯುವಕರು, ಮಹಿಳೆಯರು, ರೈತರು, ಬಡವರ ಸಮಸ್ಯೆಗೆ ಪರಿಹಾರ ನೀಡಿತು. ಜನಸಾಮಾನ್ಯರ ಸಂಕಷ್ಟಕ್ಕೆ ಒದಗಿ ಬಂದ ಪರಿಹಾರ. ರಾಹುಲ್ ಗಾಂಧಿ ಅವರು ಕೇವಲ ಯಾತ್ರೆ ಮಾಡಲಿಲ್ಲ, ಎಲ್ಲಾ ವರ್ಗದ ಜನರ ಸಮಸ್ಯೆ ಆಲಿಸಿದರು" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಬಣ್ಣಿಸಿದರು. ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಸಭಾಂಗಣದಲ್ಲಿ ಬುಧವಾರ ನಡೆದ ಭಾರತ್ ಜೋಡೋ ಪಾದಯಾತ್ರೆಯ ಐದನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದರು. "ಭಾರತ ಜೋಡೋ ಯಾತ್ರೆ ಕೇವಲ




ಕಾಂಗ್ರೆಸ್ ಕಾರ್ಯಕ್ರಮ ಅಲ್ಲ. ದೇಶದ ಐಕ್ಯತೆ, ಸಮಗ್ರತೆಗಾಗಿ ಹಾಗೂ ನಮ್ಮ ರಾಜ್ಯದಲ್ಲಿ ಈ ಯಾತ್ರೆ ಚಾಮರಾಜನಗರ ಹಾಗೂ ರಾಯಚೂರಿನವರೆಗೆ ನಡೆದ ಯಾತ್ರೆ ದೇಶದಲ್ಲಿ ಬದಲಾವಣೆ ಗಾಳಿ ನೀಡಿದ ಸಂದೇಶ" ಎಂದರು.

"ನಮ್ಮ ರಾಜ್ಯದಲ್ಲಿ 21 ದಿನ 511 ಕಿ ಮೀ ಪಾದಯಾತ್ರೆ ನಡೆಯಿತು. ರಾಷ್ಟ್ರ ಮಟ್ಟದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 4 ಸಾವಿರ ಕಿ.ಮೀ ಹೆಜ್ಜೆ ಹಾಕಲಾಯಿತು. ನಮ್ಮ ಯಾತ್ರೆ ವೇಳೆ ಚಿತ್ರದುರ್ಗದಲ್ಲಿ ಸಾಗುವಾಗ ಜೋರಾಗಿ ಮಳೆ ಬಂದಿತ್ತು. ನಮ್ಮ ಸ್ನೇಹಿತ ಸುಧಾಕರ್ ಅಂದು ಅವರು ಹಾಗೂ ಕಾರ್ಯಕರ್ತರು ಯಾತ್ರೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಪಟ್ಟ ಶ್ರಮ. ಆದರೆ ಸುಧಾಕರ್ ಅವರು ನಮ್ಮೊಂದಿಗೆ ಇಲ್ಲ. ಅವರ ಕೆಲಸ ಸಾಕ್ಷಿಯಾಗಿ ಉಳಿದಿದೆ. ಚಾಮರಾಜನಗರದಿಂದ ರಾಯಚೂರಿನವರೆಗೆ ಪಾದಯಾತ್ರೆ ನಡೆದ ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಪಕ್ಷ ಗೆಲುವು ಸಾಧಿಸಿದೆ" ಎಂದರು.

"ಸೋನಿಯಾ ಗಾಂಧಿ ಅವರು ದಸರಾ ಸಮಯದಲ್ಲಿ ಮೂರು ದಿನ ರಾಜ್ಯದಲ್ಲಿ ಉಳಿದು ಯಾತ್ರೆ ವೇಳೆ ಭಾಗವಹಿಸಿ ಹೆಜ್ಜೆ ಹಾಕಿದರು. ಈ ಯಾತ್ರೆಯಲ್ಲಿ ಸೋನಿಯಾ ಗಾಂಧಿ ಅವರು ಹೆಜ್ಜೆ ಹಾಕಿದ್ದು ಕರ್ನಾಟಕದಲ್ಲಿ ಮಾತ್ರ. ಈ ಯಾತ್ರೆ ಸಂದರ್ಭದಲ್ಲೇ ನಡೆದ ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ನಮ್ಮ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಆಯ್ಕೆ ಮಾಡಲಾಯಿತು.

ರಾಹುಲ್ ಗಾಂಧಿ ಅವರು ಬಳ್ಳಾರಿಯಲ್ಲಿ ಮತ ಚಲಾಯಿಸಿದರು. ನಿಜಲಿಂಗಪ್ಪ ಅವರ ನಂತರ ಕರ್ನಾಟಕದವರು ಈ ಸ್ಥಾನಕ್ಕೆ ಏರಿದರು" ಎಂದು ಹೇಳಿದರು. "ಭಾರತ್ ಜೋಡೋ ಯಾತ್ರೆ ದೇಶದಲ್ಲಿ ಯಾವ ರೀತಿ ಪಾದಯಾತ್ರೆ ಮಾಡಬೇಕು ಎಂಬುದಕ್ಕೆ ಅಡಿಪಾಯ ಹಾಕಿಕೊಟ್ಟಿತು. ನಾನು ಅಧ್ಯಕ್ಷನಾಗಿದ್ದಾಗ ಈ ಯಾತ್ರೆ ನಡೆಯಿತು, 136 ಸೀಟು ಗೆದ್ದು ನೀವೆಲ್ಲ ಸರ್ಕಾರದ ಪಾಲುದಾರರಾಗಿದ್ದೀರಿ ಎಂದು ಹೇಳಲು ನನಗೆ ಹೆಮ್ಮೆಯಾಗುತ್ತದೆ. ಅದೇ ಕಾರಣಕ್ಕೆ ಈ ಸಭಾಂಗಣಕ್ಕೆ ಭಾರತ ಜೋಡೋ ಎಂದು ಹೆಸರಿಡಲಾಗಿದೆ" ಎಂದರು.

"ನಾನು ರಾಹುಲ್ ಗಾಂಧಿ ಅವರಿಗೆ ಒಂದು ವಿಚಾರ ತಿಳಿಸಿ, ದಾಖಲೆ ಸಲ್ಲಿಸಿದ್ದೆ. ಅವರು ಮರೆತಿದ್ದಾರೆ ಎಂದು ಭಾವಿಸಿದ್ದೆ. ಆದರೆ ಅವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಬಗ್ಗೆ ವೇಣುಗೋಪಾಲ್ ಅವರ ಜತೆ ಚರ್ಚೆ ಮಾಡಿದ್ದಾರೆ. ಯಾತ್ರೆ ವೇಳೆ ನಾವು ಚಿತ್ರದುರ್ಗದ ಬಳಿ ಟೀ ಕುಡಿಯುತ್ತಿರುವಾಗ ಅಜ್ಜಿಯೊಬ್ಬರು ಬಂದು ರಾಹುಲ್ ಗಾಂಧಿ ಅವರಿಗೆ ಸೌತೆಕಾಯಿ ಕೊಟ್ಟರು.

3ನೇ ಪುಟಕ್ಕೆ

## ಸರ್ಕಾರಿ ಗೈರಾಣಿ ಭೂಮಿಯಲ್ಲಿ ಅರಣ್ಯ ಇಲಾಖೆ ಅಕ್ರಮ ಗುಂಡಿ ಅಗೆತ ಕ್ರಮಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ರೋಡಲಬಂಡಾ ಗ್ರಾಪಂ ವ್ಯಾಪ್ತಿಯ ತೊರಲಬೆಂಚಿ ಗ್ರಾಮದಲ್ಲಿ ರೈತರು ಉಳುಮೆ ಮಾಡುವ ಸರ್ಕಾರಿ ಜಮೀನಿನಲ್ಲಿ ಪ್ರಾದೇಶಿಕ ಅರಣ್ಯ ಇಲಾಖೆ ಅಧಿಕಾರಿಗಳು ಅಕ್ರಮವಾಗಿ ಗುಂಡಿ ನಿರ್ಮಿಸಿ ಸಸಿ ನೆಡಲು ಮುಂದಾಗಿದ್ದು, ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಸಹಾಯಕ ಆಯುಕ್ತ ನಾಗೇಂದ್ರಬಾಬು ಕುಮಾರ ಅವರಿಗೆ ಮನವಿ ಸಲ್ಲಿಸಿದರು.**



ತೊರಲಬೆಂಚಿ ಗ್ರಾಮದ ಸರ್ವೆ 20.53/02/01 ಹಾಗೂ ಸರ್ವೆ ನಂ.84/1 ರ ಸರ್ಕಾರಿ ಗೈರಾಣಿ ಭೂಮಿಯಲ್ಲಿ ಕಳೆದ ಹಲವು . ವರ್ಷಗಳಿಂದ ಸಾಗುವಳಿ ಮಾಡುತ್ತ ಬರುತ್ತಿರುವ ರೈತರಿಗೆ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಸದರಿ ಜಮೀನಿನಲ್ಲಿ ಅರಣ್ಯ ಇಲಾಖೆ ಗುಂಡಿಗಳನ್ನು ಅಗೆದು ಸಸಿಗಳನ್ನು ನೆಟ್ಟಿರುತ್ತಾರೆ. ಕಂದಾಯ ಇಲಾಖೆ ದಾಖಲೆಗಳಲ್ಲಿ ಗೈರಾಣಿ ಭೂಮಿ 'ಎಂದು ನಮೂದಾಗಿದೆ. ಆದರೆ ಅರಣ್ಯ ಇಲಾಖೆ ಅಧಿಕೃತವಾಗಿ ದಾಖಲೆ ಮತ್ತು ಗಡಿ ನಿಗದಿ ಮಾಡಿಲ್ಲ. ಕೂಡಲೇ ಸಿಎಸ್‌ಆರ್ ಸಂಖ್ಯೆ ನೀಡುವ ಜೊತೆಗೆ ಆರ್‌ಟಿಸಿ ದಾಖಲೆ ಪರಿಶೀಲಿಸಿ ಉಳುಮೆ ಮಾಡಲು ಅನುಕೂಲ ಕಲ್ಪಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸುವುದಾಗಿ ಮನವಿಯಲ್ಲಿ ಎಚ್ಚರಿಕೆ ನೀಡಿದ್ದಾರೆ. ಅಮರಪ್ಪ ಜೋಗಿ, ರಶೀದ್ ಅಹ್ಮದ್ ಇದ್ದರು. ಗ್ರಾಮದ ವೀರಭದ್ರಪ್ಪ ಕೊಡಲೆಪ್ಪ, ನಿಂಗಮ್ಮ ಸೇರಿದಂತೆ ಇತರರು ಇದ್ದರು .

# ಅಪಘಾತದ ಗಾಯಾಳುಗಳಿಗೆ ಬಾಬುಗೌಡ ಬಾದರ್ಲಿ ಸಾಂತ್ವನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ಅಲಬನೂರು ಹಾಗೂ ಬಾದರ್ಲಿ ಗ್ರಾಮಗಳ ಮಧ್ಯೆ ಲೇಬರ್ ಖುಷಿಯರ್ ವಾಹನಕ್ಕೆ ಮತ್ತೊಂದು ವಾಹನ ಡಿಕ್ಕಿ ಹೊಡೆದ ಪರಿಣಾಮ ಕೆಲವರು ಗಾಯಗೊಂಡ ಘಟನೆ ನಡೆದಿದೆ.**

ಅಪಘಾತದಲ್ಲಿ ಗಾಯಗೊಂಡವರನ್ನು ತಕ್ಷಣವೇ ಸಿಂಧನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸದೆ, ಗಾಯಾಳುಗಳು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ



ಪಾರಾಗಿದ್ದಾರೆ. ಘಟನೆ ತಿಳಿಯುತ್ತಿದ್ದಂತೆ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ಅವರು ಆಸ್ಪತ್ರೆಗೆ ಧಾವಿಸಿ ಗಾಯಾಳುಗಳನ್ನು ಭೇಟಿ ಮಾಡಿದರು. ಗಾಯಾಳುಗಳೊಂದಿಗೆ ಆತ್ಮೀಯವಾಗಿ ಮಾತನಾಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದ ಅವರು, ಕುಟುಂಬಸ್ಥರಿಗೆ ಧೈರ್ಯ ತುಂಬಿದರು.

ಬಳಿಕ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯಿಂದ ಗಾಯಾಳುಗಳ ಆರೋಗ್ಯ ಸ್ಥಿತಿ ಮತ್ತು ನೀಡಲಾಗುತ್ತಿರುವ ಚಿಕಿತ್ಸೆಯ ಕುರಿತು ಮಾಹಿತಿ ಪಡೆದುಕೊಂಡರು. ಅಗತ್ಯವಿರುವ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಂತೆ ವೈದ್ಯರಿಗೆ ತಿಳಿಸಿದರು. "ಅಪಘಾತದಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸದಿರುವುದು ಸಮಾಧಾನದ ಸಂಗತಿ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ. ಅವರ ಚಿಕಿತ್ಸೆಗೆ ಅಗತ್ಯವಿರುವ ಎಲ್ಲ ಸಹಕಾರ ನೀಡಲಾಗುವುದು" ಎಂದು ಬಾಬುಗೌಡ ಬಾದರ್ಲಿ ಅವರು ತಿಳಿಸಿದರು.

ಶ್ರೀ ಒಳಬಳ್ಳಾರಿ ಚೆನ್ನಬಸವೇಶ್ವರ ತಾತನವರ ಆಶೀರ್ವಾದದಿಂದ ದೊಡ್ಡ ಅನಾಹುತ ತಪ್ಪಿದ್ದು, ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಸ್ಥಳೀಯರು ಪ್ರಾರ್ಥಿಸಿದ್ದಾರೆ. ಈ ಸಂದರ್ಭದಲ್ಲಿ ಆನಂದ್ ಪಟೇಲ್, ರಾಮನಗೌಡ ಸಾಸಲಮರಿ, ಎನ್. ಎಸ್. ಅಂಬರೀಶ್ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

## ದಾನಿಗಳಿಂದ ಸೈಕಲ್ ಕೊಡಿಸಲು ನೆರವಾದ ಅಮರೇಗೌಡ ಮಲ್ಲಾಪುರಗೆ ವಿತರಕರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ವನಸಿರಿ ಫೌಂಡೇಷನ್ ಸಂಸ್ಥಾಪಕ ಹಾಗೂ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಅವರು, ಗ್ರಾಮೀಣ ಭಾಗದಲ್ಲಿ ಮತ್ತು ಪಟ್ಟಣಗಳಲ್ಲಿ ಪತ್ರಿಕೆ ಹಂಚುವ ಹುಡುಗರಿಗೆ ಹಾಗೂ ಏಜೆಂಟರಿಗೆ ಇದುವರೆಗೂ ಒಟ್ಟು 35 ಸೈಕಲ್ ಗಳನ್ನು ತಾಲೂಕಿನ ವಿವಿಧ ದಾನಿಗಳಿಂದ ವಿತರಣೆ ಮಾಡಿಸಿ,**

ಮಳೆ, ಚಳಿ, ಗಾಳಿ, ಎನ್ನದೆ ಪ್ರತಿ ದಿನ ಮನೆಮನೆಗೆ ಸುದ್ದಿಯನ್ನು ಹೊತ್ತು ಹೋಯ್ಯುವ ಬಡ ಶ್ರಮಿಕರಿಗೆ ನೆರವಾಗಿ ಮಾನವೀಯತೆ ಮೆರೆದ ಕಾರಣ ಏಜೆಂಟರು ಮತ್ತು ವಿತರಕರಿಂದ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.



ಈ ವೇಳೆ: ಹಿರಿಯ ಪತ್ರಕರ್ತರಾದ ಡಿ.ಎಚ್.ಕಂಬಳಿ, ಶ್ಯಾಮ್ ಕುಮಾರ್, ಚಂದ್ರಶೇಖರ ಬೆನ್ನೂರು, ವೀರೇಶ ಗಡ್ಡಿಮಾಳ, ಮುಖಂಡರಾದ ನಿರುಪಾದೆಪ್ಪ ಗುಡಿಹಾಳ ವಕೀಲರು, ಕಲಾವಿದ ನಾರಾಯಣಪ್ಪ ಮಾಡಸಿರವಾರ, ಹಿರಿಯ ಏಜೆಂಟರಾದ ಕೊಟ್ಟೂರಯ್ಯಸ್ವಾಮಿ, ನಜೀರ್ ಅಲಿ, ಅಮರೇಶ ಜಾಲವಾಡಗಿ, ಸೋಮನಾಥ ಅಲಬನೂರು, ನಾಗಭೂಷಣ ಯರದಿಹಾಳ, ವಿತರಕರಾದ ಪ್ರವೀಣಕುಮಾರ, ಬಾಲಾಜಿ, ಪ್ರಿಯಾ ಅಮರೇಶ ಜಾಲವಾಡಗಿ, ಮಾಳಪ್ಪ ಅಕುಲ್, ಯಶವಂತ್, ಅಖಿಲ್, ಅನಿಲ್, ದುರುಗೇಶ, ವಿಶ್ವ, ಸೇರಿದಂತೆ ಇತರರಿದ್ದರು.

## ಮುದಗಲ್ ವಾರ್ಡ್ 1ರಲ್ಲಿ ವಿದ್ಯುತ್ ಅವ್ಯವಸ್ಥೆ: ಹೊಸ ಕಂಬಗಳ ಅಳವಡಿಕೆಗೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ಮುದಗಲ್: ಪಟ್ಟಣದ ವಾರ್ಡ್ ನಂ. 1ರ ಕಬರಸ್ತಾನದ ಪಕ್ಕದ ಪ್ರದೇಶದಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಇಲ್ಲದೆ ನಿವಾಸಿಗಳು ಪರದಾಡುವಂತಾಗಿದೆ.**

ಹಲವು ಮನೆಗಳಿಗೆ ಒಂದೇ ವಿದ್ಯುತ್ ಕಂಬದ ಮೂಲಕ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು, ಇದರಿಂದ ಕಡಿಮೆ ವೋಲ್ಟೇಜ್ ಹಾಗೂ ಪದೇಪದೇ ವಿದ್ಯುತ್ ತಾಂತ್ರಿಕ ದೋಷಗಳು ಉಂಟಾಗುತ್ತಿವೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಒಂದೇ ಕಂಬದ ಮೇಲೆ ಹೆಚ್ಚಿನ ಸಂಖ್ಯೆಯ ಮನೆಗಳ ವಿದ್ಯುತ್ ಸಂಪರ್ಕ ಅವಲಂಬಿತವಾಗಿರುವುದರಿಂದ ವಿದ್ಯುತ್ ಲೋಡ್ ಹೆಚ್ಚಾಗುತ್ತಿದೆ. ಪರಿಣಾಮವಾಗಿ ಮನೆಗಳಲ್ಲಿನ ಫ್ಯಾನ್, ಫ್ರಿಜ್, ಟಿವಿ, ಮೋಟಾರ್ ಸೇರಿದಂತೆ



ವಿವಿಧ ವಿದ್ಯುತ್ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸದ ಸ್ಥಿತಿ ನಿರ್ಮಾಣವಾಗಿದೆ. ಕೆಲವೊಮ್ಮೆ ವೋಲ್ಟೇಜ್ ಏರಿಳಿತದಿಂದ ಉಪಕರಣಗಳಿಗೆ ಹಾನಿಯಾಗುವ ಆತಂಕವೂ ನಿವಾಸಿಗಳಲ್ಲಿ ಮೂಡಿದೆ.

ಈ ಕುರಿತು ವಾರ್ಡ್‌ನ ನಿವಾಸಿಗಳು ಈಗಾಗಲೇ ಸಂಬಂಧಪಟ್ಟ ವಿದ್ಯುತ್ ಇಲಾಖೆಗೆ ಮನವಿ ಸಲ್ಲಿಸಿ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದ್ದಾರೆ. ಆದರೆ ಮನವಿ ಸಲ್ಲಿಸಿ ಹಲವು ದಿನಗಳು ಕಳೆದರೂ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ಅಗತ್ಯವಿರುವ ಕಡೆಗಳಲ್ಲಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸಿ, ಹಳೆಯ ಲೈನ್‌ನ್ನು ಮರುಜೋಡಣೆ ಮಾಡಿ, ಲೋಡ್‌ಗೆ ಅನುಗುಣವಾಗಿ ವಿದ್ಯುತ್ ವ್ಯವಸ್ಥೆಯನ್ನು ಸುಧಾರಿಸಬೇಕು ಎಂದು ಎ.ಐ.ಎಂ.ಐ.ಎಂ. ಮುದಗಲ್ ಘಟಕದ ಅಧ್ಯಕ್ಷರು ಆಗ್ರಹಿಸಿದ್ದಾರೆ. ವಾರ್ಡ್‌ನ ನಿವಾಸಿಗಳಿಗೆ ನಿರಂತರ ಹಾಗೂ ಸಮರ್ಪಕ ವಿದ್ಯುತ್ ಪೂರೈಕೆ ಕಲ್ಪಿಸುವುದು ಇಲಾಖೆಯ ಜವಾಬ್ದಾರಿಯಾಗಿದ್ದು, ಸಾರ್ವಜನಿಕರ ಸಮಸ್ಯೆಯನ್ನು ಇನ್ನಷ್ಟು ವಿಳಂಬ ಮಾಡದೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಕುಷ್ಟ ರೋಗಿಗಳ ಬಗ್ಗೆ ಅಸ್ಪೃಶ್ಯತೆ ಬೇಡ ಮಾನವೀಯತೆ ಇರಲಿ: ಡಾ.ಆಂಜನೇಯ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಈ ಕುಷ್ಟ ರೋಗವು ಮೈಕ್ರೋ ಬ್ಯಾಕ್ಟಿರಿಯಂ ಲೆಪ್ರಯಿ ಸೂಕ್ಷ್ಮಾಣು ಜೀವಿಯಿಂದ ಬರುವ ಸಾಮಾನ್ಯ ರೋಗ ಈ ರೋಗವು ಹ್ಯಾನ್ಸೆನ್ಸ್ ಖಾಯಿಲೆ ಅಥವಾ ಮೈಕ್ರೋ ಬ್ಯಾಕ್ಟೇರಿಯನ್ ಲೆಟ್ರಯಿ ಎಂಬ ಬ್ಯಾಕ್ಟೀರಿಯಾದಿಂದ ಬರುವ ದೀರ್ಘಕಾಲದ ಸಾಂಕ್ರಾಮಿಕ ರೋಗವಾಗಿದೆ.**

ಇದು ಮುಖ್ಯವಾಗಿ ಚರ್ಮ ಬಾಯಿಯ ನರಗಳು ಕಣ್ಣುಗಳು ಮತ್ತು ಮೇಲ್ಮೈ ಉಸಿರಾಟದ ನಾಳದ ಮೇಲೆ ಪರಿಣಾಮ ಬೀರುತ್ತದೆ ಕುಷ್ಟರೋಗ ಶಾಪವಲ್ಲ ಮೂಡನಂಬಿಕೆ ಬಿಡಿ, ಇದು ಗುಣಪಡಿಸಬಹುದಾದ ಕಾಯಿಲೆಯಾಗಿದೆ. ರೋಗಿಯನ್ನು ಪ್ರೀತಿಸಿ ತಾರತಮ್ಯ ಮಾಡದೆ, ಸಕಾಲದಲ್ಲಿ ಚಿಕಿತ್ಸೆ ಕೊಡಿಸಿ ಅಂಗವಿಕಲತೆ ಹೋಗಲಾಡಿಸಬೇಕು ಎಂದು ಆಡಳಿತ ವೈದ್ಯಾಧಿಕಾರಿ ಡಾ.ಆಂಜನೇಯ ತಿಳಿಸಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಆರೋಗ್ಯ ಅಧಿಕಾ–



ರಿಗಳ ಕಚೇರಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಧಡೇಸೂಗರು, ಸರ್ಕಾರಿ ಪ್ರೌಢಶಾಲೆ ಬೂದಿವಾಳ ಇವರ ಸಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಕುಷ್ಟರೋಗ ನಿವಾರಣ ಕಾರ್ಯಕ್ರಮದ ಅಡಿಯಲ್ಲಿ ಅಡ್ಡ ಪರಿಶೀಲನೆ ಮತ್ತು ವಿಶೇಷ ಕುಷ್ಟ ರೋಗ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಾತನಾಡಿದ ಅವರು, ಚರ್ಮಕ್ಕೆ ಸಂಬಂಧಿಸಿದ ದೇಹದ ಯಾವುದೇ ಭಾಗದಲ್ಲಿ ಸ್ಪರ್ಶ ಜ್ಞಾನವಿಲ್ಲದ ತಿಳಿ ಬಿಳಿ ಅಥವಾ ತಾಮ್ರ ಬಣ್ಣದ ಮಚ್ಚೆಗಳು, ಕೂದಲು ನವೆ, ತುರಿಕೆ, ಕೈಕಾಲುಗಳಲ್ಲಿ ಜೋಮು ಹಿಡಿಯುವುದು, ಸ್ಪರ್ಶಜ್ಞಾನ ಇಲ್ಲದಿರಲು ಮುಖದಲ್ಲಿ ಮತ್ತು ಕಿವಿಗಳ ಮೇಲೆ ಎಣ್ಣೆ ಸವರಿದಂತೆ ಹೊಳೆಯುವುದು, ಗಂಟುಗಳು ಕಾಣಿಸುವುದು, ಎಣ್ಣೆ ಹಚ್ಚಿದಂತೆ ಹೊಳೆಯುವ ಚರ್ಮ ಪ್ರಮುಖ ಲಕ್ಷಣಗಳ ಬಗ್ಗೆ ಸಮೀಕ್ಷೆ ನಡೆಸಿ ರೋಗದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಎಚ್‌ಐಒ, ಡಿಎಚ್‌ಒ ಆಫೀಸಿನ ಬಿ.ಬಿ.ದೊಡ್ಮನಿ ಮಾತನಾಡಿ, ಈ ರೋಗವು ಮುಖ್ಯವಾಗಿ ಚರ್ಮ ಹಾಗೂ ನರಗಳಿಗೆ ಸಂಬಂಧಿಸಿದ ಕಾಯಿಲೆಯಾಗಿದೆ ಇದು ಬಡವರು, ಶ್ರೀಮಂತರು, ಗಂಡು, ಹೆಣ್ಣೆಂಬ ಭೇದ ಭಾವವಿಲ್ಲದೆ ಯಾರಿಗಾದರೂ ಬರಬಹುದು ಕುಷ್ಟ ರೋಗ ಕಂಡು ಬಂದ ಪ್ರಾರಂಭದಲ್ಲೇ ಆರ್.ಸಿಎಸ್ ಶಸ್ತ್ರ ಚಿಕಿತ್ಸೆ ಮೂಲಕ ಅಂಗವಿಕಲತೆ ತಡೆಗಟ್ಟಬಹುದು. 1 ರಿಂದ 5 ಮಚ್ಚೆಗಳಿದ್ದರೆ 6 ತಿಂಗಳು, ಹೆಚ್ಚಿದ್ದರೆ 12 ತಿಂಗಳು ಚಿಕಿತ್ಸೆ ಕೊಡಿಸಬೇಕು ಚಿಕಿತ್ಸೆಯ ಔಷಧಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯುತ್ತದೆ ಎಂದು ತಿಳಿಸಿದರು.

ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮಾತನಾಡಿ, ಕುಷ್ಟರೋಗ ನಿರ್ಮೂಲನೆಗೆ ಸಮಾಜವು ಬಹಳ ಮುಖ್ಯ, ಕುಷ್ಟರೋಗದ ಬಗ್ಗೆ ವೈಜ್ಞಾನಿಕ ಸತ್ಯ ಸಂಗತಿ ತಿಳಿದು ಬೇರೆಯವರಿಗೆ ತಿಳಿಸಿ, ಲಕ್ಷಣ ಇದ್ದವರನ್ನು ಗುರುತಿಸಿ ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಕೊಡಿಸಬೇಕು. ಕುಷ್ಟ ರೋಗ ನಿರ್ಮೂಲನೆ ಮಾಡಲು ಜಾಗತೀಕರಣ ಆರೋಗ್ಯ ಸಂಸ್ಥೆ ಹಾಕಿಕೊಂಡ ಕಾರ್ಯಕ್ರಮಕ್ಕೆ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡುವುದು ಕುಷ್ಟರೋಗ ಮುಕ್ತ ಸಮಾಜವನ್ನಾಗಿ ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಮನೆಮನೆ ಸಮೀಕ್ಷೆಯ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ: ಶಾಲಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ಸಾಹೇರಾ ಭಾನು ಎಮ್.ಎಲ್.ಟಿಒ, ಮಹೇಂದ್ರಕುಮಾರ ಎಚ್‌ಐಒ, ಅಭಿಲಾಷ್ ಸಿಎಚ್‌ಒ, ಶ್ವೇತಾ ಪಿಎಚ್.ಸಿಒ, ರಾಜೇಶ್ವರಿ, ಹೇಮಾವತಿ, ಶ್ರೀದೇವಿ ದೇವಮ್ಮ, ಆರತಿ, ಪೂರ್ಣಿಮಾ, ಮಲ್ಲಮ್ಮ, ಬಸಮ್ಮ, ಸೇರಿದಂತೆ ಆಶಾ ಕಾರ್ಯಕರ್ತೆಯರಿದ್ದರು.

## ಸಾಹಿತ್ಯ ಸಿಂಚನ

### ನದಿಯಂತೆ ಸಾಗುವ ಜೀವನ

ಕನಸುಗಳ ದಡದಲ್ಲಿ ಹೆಜ್ಜೆ ಗುರುತು ಮೂಡಿಸಿ,
ಸಾಧನೆಯ ಸಾಗರದತ್ತ ನಿಧಾನವಾಗಿ ನಡೆದು,
ಬಿದ್ದಾಗಲೂ ಮತ್ತೆ ಎದ್ದು ನಿಂತು,
ಸೋಲಿನ ಪಾಠವನ್ನು ಗೆಲುವಾಗಿ ಬದಲಿಸೋಣ.

ನದಿಗೆ ತನ್ನ ದಾರಿ ತಾನೇ ಗೊತ್ತಿರುವಂತೆ,
ಜೀವನಕ್ಕೂ ತನ್ನ ಗುರಿಯೊಂದು ಇರುತ್ತದೆ.
ಎದುರಾಗುವ ಪ್ರತಿಯೊಂದು ತಿರುವಿನಲ್ಲೂ,
ಹೊಸ ಅನುಭವದ ಪಾಠವೊಂದು ಸಿಗುತ್ತದೆ.

ಒಣಗಿದ ದಡಗಳಿಗೂ ಜೀವ ತುಂಬುವ ನದಿಯಂತೆ,
ನಮ್ಮ ಬದುಕೂ ಮತ್ತೊಬ್ಬರಿಗೆ ಆಶೆಯಾಗಲಿ.
ಮೌನವಾಗಿ ಹರಿಯುವ ನೀರಿನಂತೆ,
ನಮ್ಮ ಕಾರ್ಯಗಳು ಮಾತಿಗಿಂತ ದೊಡ್ಡದಾಗಲಿ.

ಸಮಯದ ಅಲೆಗಳು ಎಷ್ಟೇ ಬದಲಾಗಲಿ,
ಮನದ ಧೈರ್ಯ ಮಾತ್ರ ಎಂದಿಗೂ ಕುಗ್ಗದಿರಲಿ.
ಕನಸುಗಳ ದೋಣಿಯನ್ನು ಭರವಸೆಯಿಂದ ನಡೆಸಿ,
ಭವಿಷ್ಯದ ದಡವನ್ನು ತಲುಪುವ ಹಂಬಲವಿರಲಿ.

ಹರಿಯುವ ನದಿ ಹಿಂದಿರುಗುವುದಿಲ್ಲ,
ಕಳೆದ ಕಾಲವೂ ಮರಳಿ ಬರುವುದಿಲ್ಲ.
ಆದರೆ ಪ್ರತಿಯೊಂದು ಹೊಸ ಬೆಳಗಿನೊಂದಿಗೆ,
ಹೊಸ ದಾರಿಯನ್ನು ಆರಿಸಿಕೊಳ್ಳಬಹುದು.

ಜೀವನವೆಂಬ ನದಿ ಸದಾ ಹರಿಯುತ್ತಿರಲಿ,
ಸಂತೋಷದ ಹೂವುಗಳು ದಾರಿಯಲಿ ಅರಳಲಿ.
ಗುರಿಯ ಸಾಗರವನ್ನು ಸೇರುವವರೆಗೂ,
ನಮ್ಮ ಪಯಣ ಭರವಸೆಯಿಂದ ಮುಂದುವರಿಯಲಿ

## ಕಡಿಮೆ ಆಗಿದ್ದು ಹಣದ ಮೌಲ್ಯ ಅಲ್ಲ? ಹೆಚ್ಚಾಗಿದ್ದು ನಮ್ಮ ಅಗತ್ಯತೆಗಳು?

ನಾವು ಮಕ್ಕಳಾಗಿದ್ದಾಗ ದಾರಿಯಲ್ಲಿ ಅಥವಾ ಎಲ್ಲಾದರೂ ಹೋಗುವಾಗ 1 ಸಿಕ್ಕರೆ ಅದೆಷ್ಟು ಖುಷಿಯಾಗುತ್ತಿತ್ತು? ಮುಖದಲ್ಲಿ ಆ ಸಂತೋಷ ಹೇಳತೀರದು. ಮೊದಲು ಅದನ್ನು ತೆಗೆದುಕೊಂಡು, ಯಾರಿಗೂ ಕಾಣದಂತೆ ಬಚ್ಚಿಟ್ಟುಕೊಳ್ಳುತ್ತಿದ್ದೆವು ಅಲ್ವಾ?

ಆದರೆ ಈಗ ದೊಡ್ಡವರಾಗಿದ್ದೇವೆ. ಅದೇ ?1 ಸಿಕ್ಕರೂ ಹಿಂದಿನ ಸಂತೋಷವಿಲ್ಲ. ಅದನ್ನು ತೆಗೆದುಕೊಳ್ಳಬೇಕು ಅನ್ನುವ ಆಸೆಯೂ ಇರುವುದಿಲ್ಲ. ಏಕೆಂದರೆ ಆ ಹಣ ತನ್ನ ಮಹತ್ವವನ್ನು ಕಳೆದುಕೊಂಡಿಲ್ಲ? ಆದರೆ ಆ ?1 ನಮ್ಮ ಜೀವನದ ಅಗತ್ಯಗಳಿಗೆ ಸಾಕಾಗುವುದಿಲ್ಲ ಎಂದು ನಾವು ಅದನ್ನು ಕಡೆಗಣಿಸುತ್ತೇವೆ.

ಕಡಿಮೆಯಾಗಿದ್ದು ಹಣದ ಮೌಲ್ಯವಲ್ಲ, ಹೆಚ್ಚಾಗಿದ್ದು ನಮ್ಮ ಅಗತ್ಯತೆಗಳು.

ಜೀವನ ಅರ್ಥವಾದಷ್ಟು ನಮಗೆ ಎಲ್ಲದರ ಬೆಲೆಯೂ ತಿಳಿಯುತ್ತಾ ಹೋಗುತ್ತದೆ. ಹಾಗೆಯೇ ಕೆಲವೊಮ್ಮೆ ವ್ಯಕ್ತಿಗಳ ಬೆಲೆಯೂ ಅವರು ನಮ್ಮ ಜೀವನದಿಂದ ದೂರವಾದಾಗಲೇ ಅರ್ಥವಾಗುತ್ತದೆ.

ವ್ಯಕ್ತಿಯಾಗಲಿ, ವಸ್ತುವಾಗಲಿ? ನಮ್ಮ ಬಳಿ ಇದ್ದಾಗಲೇ ಅದರ ಬೆಲೆಯನ್ನು ಅರಿತು, ಪ್ರೀತಿಸಿ, ಕಾಳಜಿ ವಹಿಸಬೇಕು. ಏಕೆಂದರೆ ಇಂದು ನಮಗೆ ಅದರ ಅವಶ್ಯಕತೆ ಇಲ್ಲದಿರಬಹುದು? ಆದರೆ ಮುಂದೊಂದು ದಿನ ಅದೇ ವ್ಯಕ್ತಿ ಅಥವಾ ಅದೇ ವಸ್ತು ನಮ್ಮ ಜೀವನದಲ್ಲಿ ಬಹಳ ಮುಖ್ಯವಾಗಬಹುದು.

ಇದ್ದಾಗ ಅದರ ಬೆಲೆ ಅರಿಯುವುದು ಜಾಣತನ? ಕಳೆದುಕೊಂಡ ಮೇಲೆ ಅದರ ಬೆಲೆ ಅರಿಯುವುದು ನೋವು.



ಗಂಗಾಶ್ರೀ ವಿಶ್ವಕರ್ಮ ಮಾನ್ವಿ


## ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ಗೋವಿಂದ ಸೇವಾ ಸಮಿತಿ ನೇತೃತ್ವದಲ್ಲಿ ಸಾಮೂಹಿಕ ವಿವಾಹ

# ಯಶಸ್ವಿ ಪೂರ್ವಭಾವಿ ಸಭೆ; ಸರ್ವರ ಸಹಕಾರಕ್ಕೆ ಮುಖಂಡರ ಕರೆ

❏ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಪಟ್ಟಣದ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ಗೋವಿಂದ ಸೇವಾ ಸಮಿತಿ ನೇತೃತ್ವದಲ್ಲಿ ನಡೆಯಲಿರುವ ಸಾಮೂಹಿಕ ವಿವಾಹ ಕಾರ್ಯಕ್ರಮದ ಅಂಗವಾಗಿ ಮಂಗಳವಾರ ಶ್ರೀ ಲಕ್ಷ್ಮೀರಂಗನಾಥ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಕಳೆದ ವರ್ಷ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಅದೇ ಮಾದರಿಯಲ್ಲಿ ಈ ವರ್ಷವೂ ಗ್ರಾಮದ ಎಲ್ಲರನ್ನು ವಿಶ್ವಾಸಕ್ಕೆ ಪಡೆದು, ಸರ್ವರ ಸಹಕಾರದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕು ಎಂದು ಸಭೆಯಲ್ಲಿ ಮುಖಂಡರು ಅಭಿಪ್ರಾಯಪಟ್ಟರು.



ಸಾಮೂಹಿಕ ವಿವಾಹವು ಬಡ ಹಾಗೂ ಅಗತ್ಯವಿರುವ ಕುಟುಂಬಗಳಿಗೆ ನೆರವಾಗುವ ಮಹತ್ವದ ಸಾಮಾಜಿಕ ಕಾರ್ಯವಾಗಿದೆ.

ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಲು ಕೈಗೊಳ್ಳಬೇಕಾದ ಸಿದ್ಧತೆಗಳು, ಜವಾಬ್ದಾರಿಗಳ ಹಂಚಿಕೆ ಹಾಗೂ ವಿವಿಧ ವ್ಯವಸ್ಥೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಊರಿನ ಪ್ರಮುಖ ರಾದ ರಾಜಾ ರಾಮಬದ್ರಪ್ಪ ನಾಯಕ ದೊರೆ, ಮೌನೇಶ ದೇಸಾಯಿ, ಪ್ರಭಾಕರ್ ದೇಶಪಾಂಡೆ, ಶಂಕರಗೌಡ ಮಾಲಿ ಪಾಟೀಲ್, ಆನಂದಗೌಡ ಮಾಲಿ ಪಾಟೀಲ್, ವೇಂಕೋಬ್ ಪೂಜಾರಿ, ಚಂದ್ರಕಾಂತ ಚಿಕ್ಕಲ್, ಸಿದ್ದಪ್ಪ ಗುಮೆದಾರ, ಯಾಸೀನ್ ಸಾಬ್ ಮುಲ್ಲಾ, ಮುದುರಂಗಪ್ಪ ಕೆಇಬಿ, ಅಯ್ಯಪ್ಪ ತಾತ,ಹುಸೇನ್ ನಾಸಿ, ರಂಗಪ್ಪ ಬಂಡಿ,ಮಹೇಬೂಬ್ ಕಾರ್ಪೆಂಟರ್,ರಂಗಪ್ಪ ತೊಗರಿ, ಖುರ್ಷಿದ್ ಪಟೇಲ್, ಬೂತಪ್ಪ ದೇವರಮನಿ, ಹೈದರ್ ಸಾಬ್,

ಶಿವನಗೌಡ ಕುಳ್ಳಿ, ರಂಗನಾಥ ಕಟ್ಟಿಮನಿ, ರಮೇಶ ತೆಗ್ಗೆಳ್ಳಿ, ಶಿವಪ್ಪ ಫೋಟೋ ಸ್ಟುಡಿಯೋ, ಬಾಲಯ್ಯ ಯಾರಕಮಟ್ಟಿ, ರಂಗಪ್ಪ ಪೂಜಾರಿ, ವೆಂಕೋಬ ತಿಂಪುರ್, ತಿಮ್ಮಣ್ಣ ಕ್ಯಾದಿಗೇರ, ಮಾನಪ್ಪ ನೀಸ್ಸಾಣಿ, ವೆಂಕಪ್ಪ ಲಿಂಗದಹಳ್ಳಿ, ರಂಗಯ್ಯ ಹಿಲಾಲ್‌ಪುರ, ಬಾಳಪ್ಪ ಭಾವಿಮನಿ, ಗೌಡಪ್ಪ ವರಟಿಗೇರ್,ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹೊಸ ದಿಗಂತದತ್ತ ಹೆಜ್ಜೆ ಇಟ್ಟ ಹೊಸ ವಿದ್ಯಾರ್ಥಿಗಳು

## ಮುದುಗಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ `Freshers' Orientation Programme'



❏ ನೈಜ್ಯ ದೆಸೆ ನ್ಯೂಸ್

ಮುದುಗಲ್: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುದುಗಲ್‌ನಲ್ಲಿ 2026?27ನೇ ಸಾಲಿಗೆ ಹೊಸದಾಗಿ ಪ್ರವೇಶ ಪಡೆದ ಬಿ.ಎ., ಬಿ.ಕಾಂ. ಹಾಗೂ ಬಿ.ಎಸ್ಸಿ. ವಿದ್ಯಾರ್ಥಿಗಳಿಗಾಗಿ "ಹೊಸ ದಿಗಂತ – Freshers' Orientation Programme" ಕಾರ್ಯಕ್ರಮವನ್ನು ಬುಧವಾರ ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಭೀಮಶಂಕರಪ್ಪ ವಹಿಸಿದ್ದರು. ಹೊಸ ವಿದ್ಯಾರ್ಥಿಗಳಿಗೆ ಕಾಲೇಜಿನ ಶೈಕ್ಷಣಿಕ ವಾತಾವರಣದ ಪರಿಚಯ ಮಾಡಿಕೊಡುವುದರ ಜೊತೆಗೆ, ಉನ್ನತ ಶಿಕ್ಷಣದ ಅವಕಾಶಗಳು, ಕೌಶಲ್ಯಾಭಿವೃದ್ಧಿ, ವೃತ್ತಿ ಆಯ್ಕೆ, ಗುರಿ ನಿರ್ಧಾರ ಹಾಗೂ ವ್ಯಕ್ತಿತ್ವ ವಿಕಸನದ ಕುರಿತು ಮಾರ್ಗದರ್ಶನ ನೀಡಲಾಯಿತು. ಒಟ್ಟು 12 ಅಧಿವೇಶನಗಳನ್ನು ಒಳಗೊಂಡ ಕಾರ್ಯಕ್ರಮದಲ್ಲಿ ವಿವಿಧ ವಿಷಯಗಳ ಕುರಿತು ಪರಿಣತರಿಂದ ತರಬೇತಿ ನೀಡಲಾಯಿತು.

ಅಧಿವೇಶನ 1, 6 ಮತ್ತು 7ನ್ನು ಶ್ರೀಮತಿ ಶೋಭಾ ಬಿ. ಬೋದಿಹಾಳ, ಅಧಿವೇಶನ 2 ಮತ್ತು 3ನ್ನು ಶ್ರೀ ಮಹೇಶಕುಮಾರ್, ಅಧಿವೇಶನ 4 ಮತ್ತು 5ನ್ನು ಶ್ರೀ ಏಜಾಜ್, ಅಧಿವೇಶನ 8 ಮತ್ತು 9ನ್ನು ಶ್ರೀ ನಾಗರಾಜ, ಅಧಿವೇಶನ 10 ಮತ್ತು 11ನ್ನು ಶ್ರೀಮತಿ ಸರಿತಾ ಇಂಚೂರ ಹಾಗೂ ಅಧಿವೇಶನ 12ನ್ನು ಶ್ರೀ ಎಂ.ಡಿ. ಚಿತ್ತರಗಿ ನಡೆಸಿದರು. ಕಾರ್ಯಕ್ರಮದಲ್ಲಿ ಈಐಓ (ಮೂಲ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ), ಸಂವಹನ ಕೌಶಲ್ಯಗಳು (LSRW), ಡಿಜಿಟಲ್ ಕೌಶಲ್ಯಗಳು, ತಾರ್ಕಿಕ ಚಿಂತನೆ ಮತ್ತು ಸಾಮರ್ಥ್ಯ, 21ನೇ ಶತಮಾನದ ಕೌಶಲ್ಯಗಳು, ಆತ್ಮಜ್ಞಾನ ಮತ್ತು ಇತರರ ಅರಿವು, ವೃತ್ತಿ ಆಯ್ಕೆ, ಗುರಿ ನಿರ್ಧಾರ ಹಾಗೂ ಪರಿವರ್ತನೆ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಯಿತು.

ಹೊಸದಾಗಿ ಕಾಲೇಜಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕಾಲೇಜಿನ ಶೈಕ್ಷಣಿಕ ಹಾಗೂ ಸಾಮಾಜಿಕ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳಲು ಮತ್ತು ತಮ್ಮಲ್ಲಿರುವ ಪ್ರತಿಭೆ ಹಾಗೂ ಕೌಶಲ್ಯಗಳನ್ನು ಗುರುತಿಸಿಕೊಂಡು ಬೆಳೆಸಿಕೊಳ್ಳಲು ಈ ಕಾರ್ಯಕ್ರಮವು ಸಹಕಾರಿಯಾಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಕಾಲೇಜಿನ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಸಹಕಾರದಿಂದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

# ಡ್ರಗ್ಸ್ ಮುಕ್ತ ಮಾಡಲು ನಿಮ್ಮೆಲ್ಲರ ಸಹಕಾರ ಮುಖ್ಯ ಎಸ್‌ಪಿ ಸಾಹಿಲ್ ಬಾಗ್ಲಾ

❏ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯ. ಯುವಕರು ದುಶ್ಚಟಗಳಿಗೆ ಬಲಿಯಾಗದಂತೆ ಜಾಗೃತಿ ಮೂಡಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಎಸ್‌ಪಿ ಸಾಹಿಲ್ ಬಾಗ್ಲಾ ಹೇಳಿದರು. ಮುಂದುವರಿದ ಭಾಗ ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗಣೇಶೋತ್ಸವದ ಪೂರ್ವಭಾವಿ ಸಭೆ ಹಾಗೂ 'ಡ್ರಗ್ಸ್ ಬೇಡ' ಅಭಿಯಾನ ಕಾರ್ಯಕ್ರಮ ನಡೆಯಿತು.**

ಸಿಪಿಐ ವಿಶ್ವನಾಥ ಹಿರೇಗೌಡ್ರ ಮಾತನಾಡಿ, ಯುವಕರಿಗೆ ಉತ್ತಮ ಸಂದೇಶ ನೀಡುವ ಉದ್ದೇಶದಿಂದ ಡ್ರಗ್ಸ್ ವಿರುದ್ಧ ಜಾಗೃತಿ ಮೂಡಿಸಲಾಗುತ್ತಿದೆ. ಶಾಂತಿ ಮತ್ತು ಸೌಹಾರ್ದತೆಗೆ ಹೆಸರಾದ ಈ ನಾಡನ್ನು ಡ್ರಗ್ಸ್ ಮುಕ್ತ ನಾಡನ್ನಾಗಿಸುವುದು ನಮ್ಮ ಗುರಿಯಾಗಿದೆ ಎಂದರು. ಎಸ್‌ಪಿ ಸಾಹಿಲ್ ಬಾಗ್ಲಾ ಮಾತನಾಡಿ, ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣಕ್ಕೆ ನಿಮ್ಮೆಲ್ಲರ ಸಹಕಾರ ಮುಖ್ಯ. ಗಣೇಶೋತ್ಸವದ ಸಂದರ್ಭದಲ್ಲಿ




ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಪ್ರಕಾರ ಗಣೇಶ ಮೆರವಣಿಗೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು.

ಮೆರವಣಿಗೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಲ್ಲರೂ ಸಹಕರಿಸಬೇಕು ಎಂದರು. ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ ಮಾತನಾಡಿ, ಯುವಕರು ದುಶ್ಚಟಗಳ ದಾಸರಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಯುವಕನೇ ಕುಟುಂಬದ ಆಧಾರ ಸ್ತಂಭವಾಗಿರುತ್ತಾನೆ. ಒಬ್ಬ ಯುವಕ ದುಶ್ಚಟಕ್ಕೆ ಬಲಿಯಾದರೆ ಇಡೀ ಕುಟುಂಬವೇ ನಾಶವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಡ್ರಗ್ಸ್ ಸೇರಿದಂತೆ ಎಲ್ಲ ರೀತಿಯ ದುಶ್ಚಟಗಳನ್ನು ಹೋಗಲಾಡಿಸಲು ಸಮಾಜ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದರು. ಮಾಜಿ ಶಾಸಕ ಕೆ. ಶರಣಪ್ಪ ವಕೀಲರು ಹಾಗೂ ತುಂಗಭದ್ರ ಕಾಡಾ ಅಧ್ಯಕ್ಷ ಹಸನಸಾಬ ದೋಟಿಹಾಳ ಮಾತನಾಡಿದರು. ಡಿವೈಎಸ್‌ಪಿ ನ್ಯಾಮೇಗೌಡ ಮಾತನಾಡಿ, ಡ್ರಗ್ಸ್ ಸೇರಿದಂತೆ ಬೀಡಿ, ಸಿಗರೇಟ್ ಹಾಗೂ ಮದ್ಯಪಾನದಂತಹ ವ್ಯಸನಗಳು ಆರೋಗ್ಯಕ್ಕೆ ಹಾನಿಕಾರಕವಾಗಿವೆ.

ಯುವಕರು ವ್ಯಸನಗಳಿಂದ ದೂರವಿದ್ದು, ಆರೋಗ್ಯಕರ ಜೀವನ ನಡೆಸಬೇಕು ಎಂದು ಕರೆ ನೀಡಿದರು. ಶಾಸಕ ದೊಡ್ಡನಗೌಡ ಪಾಟೀಲ್ ಮಾತನಾಡಿ, ಗಣೇಶೋತ್ಸವವನ್ನು ಅತ್ಯಂತ ಶಾಂತಿ, ಸೌಹಾರ್ದತೆ ಹಾಗೂ ಸಂಭ್ರಮದಿಂದ ಆಚರಿಸೋಣ. ಹಬ್ಬದ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಎಲ್ಲರೂ ಸಹಕರಿಸಬೇಕು ಎಂದರು. ತಹಶೀಲ್ದಾರ್ ಅಶೋಕ ಶಿಗ್ಗಾವಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ, ಪುರಸಭೆ ಮುಖ್ಯಾಧಿಕಾರಿ ವಿ.ಐ. ಬಿಳಗಿ, ಡಾ. ಕೆ.ಎಸ್. ರಡ್ಡಿ ಸೇರಿದಂತೆ ತಾಲೂಕಿನ ವಿವಿಧ ಭಾಗಗಳಿಂದ ನೂರಾರು ಜನರು ಪಾಲ್ಗೊಂಡಿದ್ದರು. ಪಿಎಸ್‌ಐ ಹನಮಂತಪ್ಪ ತಳವಾರ ಸ್ವಾಗತಿಸಿದರು. ಡಾ. ಜೀವನಸಾಬ ಬಿನ್ನಾಳ ಹಾಗೂ ನಟರಾಜ ಸೋನಾರ್ ಕಾರ್ಯಕ್ರಮ ನಿರ್ವಹಿಸಿದರು.

# ಹೆದ್ದಾರಿ ಅಭಿವೃದ್ಧಿ ಹೆಸರಿನಲ್ಲಿ ರೈತರ ದಾರಿ ಬಂದ್ ಮಾಡಬೇಡಿ: ಲಿಂಗಸೂಗೂರಿನಲ್ಲಿ ಅನ್ನದಾತರ ಆಕ್ರೋಶ

## 748ಎ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ವಿರೋಧ; ಪರ್ಯಾಯ ಸರ್ವಿಸ್ ರಸ್ತೆ, ವೈಜ್ಞಾನಿಕ ಅಂಡರ್‌ಪಾಸ್‌ಗೆ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸೂಗೂರು: ಬೆಳಗಾವಿಯಿಂದ ಹೈದರಾಬಾದ್‌ವರೆಗೆ ನಿರ್ಮಾಣವಾಗುತ್ತಿರುವ ಭಾರತಮಾಲಾ ಯೋಜನೆಯ 748ಎ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದ ರೈತರ ಜಮೀನುಗಳಿಗೆ ತೆರಳುವ ಸಂಪರ್ಕ ರಸ್ತೆಗಳು ಬಂದ್ ಆಗುತ್ತಿರುವುದನ್ನು ವಿರೋಧಿಸಿ ಲಿಂಗಸೂಗೂರಿನಲ್ಲಿ ಇಂದು ರೈತರ ಆಕ್ರೋಶ ಸ್ಫೋಟಗೊಂಡಿತು. 'ಹೆದ್ದಾರಿ ನಿರ್ಮಾಣದಿಂದ ರಸ್ತೆ ವಂಚಿತ ರೈತರ ಹೋರಾಟ ಸಮಿತಿ' ನೇತೃತ್ವದಲ್ಲಿ ಬೃಹತ್ ರೈತರ ಹಾಗೂ ಟ್ರ್ಯಾಕ್ಟರ್ ರ್ಯಾಲಿ ನಡೆಸಲಾಯಿತು.**

ಹೆದ್ದಾರಿ ನಿರ್ಮಾಣದಿಂದ ತಾಲೂಕಿನ ಹಲವು ಗ್ರಾಮಗಳ ರೈತರ ಜಮೀನುಗಳಿಗೆ ತೆರಳುವ ಸಾಂಪ್ರದಾಯಿಕ ರಸ್ತೆಗಳು ಮುಚ್ಚಿಹೋಗುವ ಪರಿಸ್ಥಿತಿ ಎದುರಾಗಿದೆ. ಇದರಿಂದ ಜಮೀನು ಇದ್ದರೂ ಅದನ್ನು ತಲುಪಲು ದಾರಿ ಇಲ್ಲದಂತಹ ಗಂಭೀರ ಸಮಸ್ಯೆ ಎದುರಾಗಲಿದೆ ಎಂದು ರೈತರು ಆತಂಕ ವ್ಯಕ್ತಪಡಿಸಿದರು.

ಅಂಡರ್‌ಪಾಸ್ ಇದೆ, ಆದರೆ ಟ್ರ್ಯಾಕ್ಟರ್ ಹೋಗುವುದಿಲ್ಲ! ಹೆದ್ದಾರಿ ಕಾಮಗಾರಿಯಲ್ಲಿ ಕೆಲವೆಡೆ ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗುತ್ತಿದೆ. ಆದರೆ ಅವುಗಳ ಎತ್ತರ, ಅಗಲ ಮತ್ತು ವಿನ್ಯಾಸ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ




ಇಲ್ಲ ಎಂಬುದು ರೈತರ ಆರೋಪವಾಗಿದೆ. ಇಂದಿನ ಕೃಷಿ ವ್ಯವಸ್ಥೆಯಲ್ಲಿ ಟ್ರ್ಯಾಕ್ಟರ್, ಹಾರ್ವೆಸ್ಟರ್, ಟಿಲ್ಲರ್ ಸೇರಿದಂತೆ ವಿವಿಧ ಆಧುನಿಕ ಕೃಷಿ ಯಂತ್ರೋಪಕರಣಗಳು ಅನಿವಾರ್ಯವಾಗಿವೆ. ಆದರೆ ಕಿರಿದಾದ ಅಥವಾ ಕಡಿಮೆ ಎತ್ತರದ ಅಂಡರ್‌ಪಾಸ್‌ಗಳ ಮೂಲಕ ಇಂತಹ ಯಂತ್ರಗಳು ಸಂಚರಿಸಲು ಸಾಧ್ಯವಾಗದಿದ್ದರೆ, ರೈತರು ತಮ್ಮ ಜಮೀನಿಗೆ ಕೃಷಿ ಯಂತ್ರಗಳನ್ನು ಕೊಂಡೊಯ್ಯಲು ಸಾಧ್ಯವಾಗುವುದಿಲ್ಲ.

"ರಸ್ತೆ ನಿರ್ಮಿಸಿ ಕೃಷಿಗೆ ದಾರಿ ಇಲ್ಲದಿದ್ದರೆ ಆ ಅಭಿವೃದ್ಧಿ ಯಾರಿಗಾಗಿ?" ಎಂಬ ಪ್ರಶ್ನೆಯನ್ನು ರೈತರು ಅಧಿಕಾರಿಗಳ ಮುಂದಿಟ್ಟರು. ಮುಚ್ಚುವ ರಸ್ತೆಗೆ ಪರ್ಯಾಯ ರಸ್ತೆ ಎಲ್ಲಿದೆ? ಹೆದ್ದಾರಿ ನಿರ್ಮಾಣದ ಸಂದರ್ಭದಲ್ಲಿ ಈಗಿರುವ ಗ್ರಾಮೀಣ ರಸ್ತೆಗಳು ಹಾಗೂ ಜಮೀನು ಸಂಪರ್ಕ ರಸ್ತೆಗಳು ಮುಚ್ಚಿಹೋಗುತ್ತಿದ್ದರೂ, ಅವುಗಳಿಗೆ ಪರ್ಯಾಯವಾಗಿ ಸಮರ್ಪಕ ಸರ್ವಿಸ್ ರಸ್ತೆಗಳ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ರೈತರು ಆರೋಪಿಸಿದರು.

ಒಂದು ರಸ್ತೆಯನ್ನು ಬಂದ್ ಮಾಡುವ ಮೊದಲು ಅದರ ಪರ್ಯಾಯ ಸಂಪರ್ಕ ರಸ್ತೆ ನಿರ್ಮಿಸಬೇಕು. ರೈತರ ಜಮೀನುಗಳಿಗೆ ವರ್ಷಪೂರ್ತಿ ಸಂಚಾರ ಸಾಧ್ಯವಾಗುವ ರೀತಿಯಲ್ಲಿ ರಸ್ತೆ ವ್ಯವಸ್ಥೆ ಕಲ್ಪಿಸಬೇಕು. ಮಳೆಗಾಲ, ಕೊಯ್ಲು ಹಾಗೂ ಬಿತ್ತನೆ ಸಂದರ್ಭದಲ್ಲಿ ಕೃಷಿ ಯಂತ್ರೋಪಕರಣಗಳು ಯಾವುದೇ ಅಡಚಣೆಯಿಲ್ಲದೆ ಸಂಚರಿಸುವಂತಿರಬೇಕು ಎಂದು ಆಗ್ರಹಿಸಿದರು.

ಹಲವು ದಿನಗಳಿಂದ ಹೋರಾಟ ರೈತರ ಸಮಸ್ಯೆ ಕುರಿತು ಹಲವು ದಿನಗಳಿಂದ ಹೋರಾಟ ಸಮಿತಿ ವಿವಿಧ ಹಂತಗಳಲ್ಲಿ ಪ್ರತಿಭಟನೆ, ಮನವಿ ಹಾಗೂ ಅಧಿಕಾರಿಗಳ ಗಮನ ಸೆಳೆಯುವ ಕಾರ್ಯ ನಡೆಸಿಕೊಂಡು ಬಂದಿದೆ. ಆದರೂ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯದ ಹಿನ್ನೆಲೆಯಲ್ಲಿ ಇಂದು ಬೃಹತ್ ಪ್ರಮಾಣದಲ್ಲಿ ರೈತರು ಟ್ರ್ಯಾಕ್ಟರ್‌ಗಳೊಂದಿಗೆ ರ್ಯಾಲಿಯಲ್ಲಿ ನಡೆಸಿದರು.

ರ್ಯಾಲಿಯಲ್ಲಿ ಭಾಗವಹಿಸಿದ್ದ ರೈತರು "ರೈತರ ಜಮೀನಿಗೆ ದಾರಿ ಬೇಕು", "ಪರ್ಯಾಯ ಸರ್ವಿಸ್ ರಸ್ತೆ ನಿರ್ಮಿಸಿ", "ವೈಜ್ಞಾನಿಕ ಅಂಡರ್‌ಪಾಸ್ ನಿರ್ಮಿಸಿ", "ಕೃಷಿ ಯಂತ್ರೋಪಕರಣಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ" ಎಂಬ ಬೇಡಿಕೆಗಳನ್ನು ಮುಂದಿಟ್ಟರು. ರೈತರೊಂದಿಗೆ ಸ್ಥಳ ಪರಿಶೀಲನೆ ನಡೆಸಲು ಆಗ್ರಹ

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಅಧಿಕಾರಿಗಳು ಕಚೇರಿಯಲ್ಲಿ ಕುಳಿತು ನಕ್ಷೆ ಆಧರಿಸಿ ನಿರ್ಧಾರ ಕೈಗೊಳ್ಳದೆ, ಸ್ಥಳಕ್ಕೆ ಭೇಟಿ ನೀಡಿ ರೈತರ ಜಮೀನು ಹಾಗೂ ಪ್ರಸ್ತುತ ಬಳಕೆಯಲ್ಲಿರುವ ರಸ್ತೆಗಳ ವಾಸ್ತವ ಸ್ಥಿತಿಯನ್ನು ಪರಿಶೀಲಿಸಬೇಕು ಎಂದು ರೈತರು ಒತ್ತಾಯಿಸಿದರು.

ಪ್ರತಿ ಗ್ರಾಮ ಹಾಗೂ ಪ್ರತಿಯೊಂದು ಜಮೀನು ಸಂಪರ್ಕ ರಸ್ತೆಯ ಸಮಸ್ಯೆಯನ್ನು ಪ್ರತ್ಯೇಕವಾಗಿ ಗುರುತಿಸಿ, ಅಗತ್ಯವಿರುವ ಕಡೆಗಳಲ್ಲಿ ಸರ್ವಿಸ್ ರಸ್ತೆ, ಸೂಕ್ತ ಅಂಡರ್‌ಪಾಸ್ ಅಥವಾ ಇತರ ಪರ್ಯಾಯ ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

**"ರೈತರಹಿತ ಕಾಪಾಡದಿದ್ದರೆ ಹೋರಾಟ ತೀವ್ರ"**

ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ರೈತರು ವಿರೋಧ ವ್ಯಕ್ತಪಡಿಸುತ್ತಿಲ್ಲ. ಆದರೆ ಹೆದ್ದಾರಿ ನಿರ್ಮಾಣದ ಜೊತೆಗೆ ರೈತರ ಕೃಷಿ ಭೂಮಿಗೆ ಸಂಪರ್ಕ ವ್ಯವಸ್ಥೆಯನ್ನೂ ಖಾತ್ರಿಪಡಿಸಬೇಕು. ರೈತರ ಬದುಕು ಮತ್ತು ಕೃಷಿ ಚಟುವಟಿಕೆಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಕಾಮಗಾರಿ ಕೈಗೊಳ್ಳಬೇಕು ಎಂಬುದು ನಮ್ಮ ಒತ್ತಾಯವಾಗಿದೆ ಎಂದು ಹೋರಾಟಗಾರರು ತಿಳಿಸಿದರು.

**ರೈತರ ಬೇಡಿಕೆಗಳಿಗೆ ಶೀಘ್ರ ಸ್ಪಂದಿಸಿ**

ಸಂಬಂಧಿಸಿದ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತವು ರೈತರೊಂದಿಗೆ ಸಭೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ರೈತರು ಎಚ್ಚರಿಕೆ ನೀಡಿದರು.

ಬೃಹತ್ ಟ್ರ್ಯಾಕ್ಟರ್ ರ್ಯಾಲಿಯಿಂದ ಲಿಂಗಸೂಗೂರು ಪಟ್ಟಣದಲ್ಲಿ ರೈತರ ಹೋರಾಟದ ಬಿಸಿ ಹೆಚ್ಚಾಗಿದ್ದು, ಅಧಿಕಾರಿಗಳು ರೈತರ ಬೇಡಿಕೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತಾರೆ ಎಂಬುದು ಇದೀಗ ಕುತೂಹಲಕ್ಕೆ ಕಾರಣವಾಗಿದೆ.

## ನೇಮಕಾತಿ ಪ್ರಕಟಣೆ

**HLL Lifecare ನೇಮಕಾತಿ 2026 ವಿವಿಧ ಹಿರಿಯ ಪ್ರಯೋಗಾಲಯ ತಂತ್ರಜ್ಞ (Senior Lab Technician) ಹುದ್ದೆಗಳಿಗೆ ನೇರ ಸಂದರ್ಶನ ಸೆಪ್ಟೆಂಬರ್ 9, 2026**

HLL Lifecare ನೇಮಕಾತಿ 2026: ವಿವಿಧ ಹಿರಿಯ ಪ್ರಯೋಗಾಲಯ ತಂತ್ರಜ್ಞ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. HLL Lifecare ಲಿಮಿಟೆಡ್, ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಹಿರಿಯ ಪ್ರಯೋಗಾಲಯ ತಂತ್ರಜ್ಞ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 12–ಸೆಪ್ಟೆಂಬರ್–2026 ರಂದು ನಡೆಯುವ ನೇರ ಸಂದರ್ಶನದಲ್ಲಿ (Walk-in-interview) ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: lifecarehll.com


1ನೇ ಪುಟದಿಂದ....

ಇದು ನಿಮ್ಮ ಅಜ್ಜಿ ಇಂದಿರಾ ಗಾಂಧಿ ಕೊಟ್ಟ ಭೂಮಿಯಲ್ಲಿ ಬೆಳೆದಿದ್ದು" ಎಂದು ಹೇಳಿದರು.

"ದೇಶದಲ್ಲಿ ಉಳುವವನಿಗೆ ಭೂಮಿ ಕೊಟ್ಟಿದ್ದು ಕಾಂಗ್ರೆಸ್ ಸರ್ಕಾರ. ಚಾಲಕರು, ರೈತರು, ನೇಕಾರರು, ಯುವಕರು, ಮಹಿಳೆಯರು, ವಿದ್ಯಾರ್ಥಿಗಳ ಜೊತೆ ಚರ್ಚೆ ನಡೆಸಿ ಅವರ ಸಮಸ್ಯೆ ಅರಿತು ನಾವು ಪಂಚ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಲು ಅಡಿಪಾಯ ಹಾಕಲಾಯಿತು. ಐದು ಬೆರಳು ಸೇರಿ ಕೈ ಮುಷ್ಠಿಯಾಯಿತು, ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು. ನಾನು ಆಗಾಗ್ಗೆ ಹೇಳುತ್ತಿರುತ್ತೇನೆ. ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ, ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಮಾತ್ರ ಚೆಂದ" ಎಂದರು.

"ಭಾರತ ಜೋಡೋ ಯಾತ್ರೆ ಮುಗಿಯುವುದಲ್ಲ. ಇದನ್ನು ಈ ಡಿ ಕೆ ಶಿವಕುಮಾರ್ ಇಲ್ಲಿಗೆ ನಿಲ್ಲಿಸುವುದಿಲ್ಲ. ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದ ಜನ ಅಧಿಕಾರಕ್ಕೆ ಬಂದಂತೆ. ಈಗಾಗಲೇ ಭಾರತ ಜೋಡೋ ಭವನ ಟ್ರಸ್ಟ್ ಆರಂಭಿಸಿದ್ದು, ಈ ಟ್ರಸ್ಟ್ ನಿಂದ ಕಾಂಗ್ರೆಸ್ ಪಕ್ಷದ ಆಶಯ, ಸಿದ್ಧಾಂತದ ಬಗ್ಗೆ ತರಬೇತಿ ಕೇಂದ್ರ ನಿರ್ಮಿಸಲಾಗುವುದು. ಈ ವಿಚಾರವಾಗಿ ನಾನು, ಹರಿಪ್ರಸಾದ್ ಹಾಗೂ ಹೈಕಮಾಂಡ್ ನಾಯಕರ ಜೊತೆ ಚರ್ಚೆ ಮಾಡಿರುವೆ" ಎಂದು ತಿಳಿಸಿದರು. "ನಾನು ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಸಚಿವ ಸಂಪುಟದಲ್ಲಿ ಭಾರತ ಜೋಡೋ ಯುವಕರ ಸಂಘ ಸ್ಥಾಪನೆಗೆ ಅನುಮೋದನೆ ನೀಡಲಾಯಿತು. 16–35 ವರ್ಷಗಳ ಯುವಕ–ರಿಗೆ ರಾಜ್ಯದಲ್ಲಿ 10 ಸಾವಿರ ಭಾರತ ಜೋಡೋ ಯುವಕರ ಸಂಘ ಮಾಡಲಾಗುತ್ತಿದೆ. ಕೇವಲ 2 ದಿನಗಳಲ್ಲಿ 7 ಲಕ್ಷ ಜನ ಆನ್ ಲೈನ್ ನಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ.

# ಜಾಲಹಳ್ಳಿಯಲ್ಲಿ ಬಾಲಕಿಯರ ವಸತಿ ನಿಲಯ ನಿರ್ಮಾಣಕ್ಕೆ ಶಾಸಕರಿಗೆ ಮನವಿ

## ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಹಾಗೂ ಮೂಲಸೌಕರ್ಯ ಕಲ್ಪಿಸುವ ಭರವಸೆ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಜಾಲಹಳ್ಳಿ ಗ್ರಾಮದಲ್ಲಿ ಬಾಲಕಿಂ–ಯರ ವಸತಿ ನಿಲಯ ನಿರ್ಮಿಸುವುದು ಸೇರಿದಂತೆ ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿ, ಜಾಲಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ವೀರೇಶ್ ಅರಕೇರಿ ಅವರು ದೇವದುರ್ಗ ವಿಧಾನಸಭಾ ಕ್ಷೇತ್ರದ ಶಾಸಕಿ ಕರೆಮ್ಮ ಜಿ. ನಾಯಕ ಅವರಿಗೆ ಮನವಿ ಸಲ್ಲಿಸಿದರು.**

ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ದೂರದ ಊರುಗಳಿಗೆ ತೆರಳಬೇಕಾದ ಪರಿಸ್ಥಿತಿ ಇದೆ. ವಿಶೇಷವಾಗಿ ಬಾಲಕಿಯರಿಗೆ ಸುರಕ್ಷಿತ ವಸತಿ ಸೌಲಭ್ಯ ಕಲ್ಪಿಸುವ ಅಗತ್ಯವಿದ್ದು, ಜಾಲಹಳ್ಳಿಯಲ್ಲಿ ಬಾಲಕಿಯರ ವಸತಿ ನಿಲಯ ನಿರ್ಮಾಣಕ್ಕೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು. ಗ್ರಾಮದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅವರು ಶಿಕ್ಷಣವನ್ನು ನಿರಂತರವಾಗಿ ಮುಂದುವ–ರಿಸಲು ಅನುಕೂಲವಾಗುವಂತೆ ವಸತಿ ಸೌಲಭ್ಯ ಸೇರಿದಂತೆ ಅಗತ್ಯ ಮೂಲಭೂತ ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ವೀರೇಶ್ ಅರಕೇರಿ ಅವರು ಶಾಸಕರ ಗಮನಕ್ಕೆ ತಂದರು.



### ವಿ–ಶಾಸಕರಿಂದ ಉತ್ತಮ ಸ್ಪಂದನೆ

**ಮನವಿಯನ್ನು ಸ್ವೀಕರಿಸಿದ ಶಾಸಕಿ ಕರೆಮ್ಮ ಜಿ. ನಾಯಕ ಅವರು ವಿಷಯವನ್ನು ಪರಿಶೀಲಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.ಹಿ**

**ಈ ಸಂದರ್ಭದಲ್ಲಿ ಜಾಲಹಳ್ಳಿ ಗ್ರಾಮದ ಮುಖಂಡರಿಂದ ಶಾಸಕಿ ಕರೆಮ್ಮ ಜಿ. ನಾಯಕ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಊರಿನ ಹಿರಿಯ ಮುಖಂಡರಾದ ಶ್ರೀಧರ್ ದೇಸಾಯಿ, ಶಂಕರಗೌಡ ಮಾಲಿ ಪಾಟೀಲ್, ವೆಂಕಪ್ಪ ತೋಟದ, ಜಾಲಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ವೀರೇಶ್ ಅರಕೇರಿ, ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರಹಿಮಾನ್ ಖುರೇಶಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.**

# ಸಚಿವ ಸತೀಶ್ ಜಾರಕಿಹೊಳಿಗೆ ಬೆಳ್ಳಂಬೆಳಿಗ್ಗೆ ಇಡಿ ಶಾಕ್ : 18ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯ ಸರ್ಕಾರದ ಪ್ರಭಾವಿ ಸಚಿವ ಸತೀಶ್ ಜಾರಕಿಹೊಳಿ ಅವರ ಮನೆ, ಕಚೇರಿ ಹಾಗೂ ಸಂಬಂಧಿಕರಿಗೆ ಸೇರಿದ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯ ಇಂದು ಬೆಳಗ್ಗೆಯಿಂದ ದಾಳಿ ಆರಂಭಿಸಿದ್ದು, ತೀವ್ರ ಶೋಧ ಕಾರ್ಯಚರಣೆ ಕೈಗೊಂಡಿದೆ. ಲೋಕೋಪಯೋಗಿ ಸಚಿವರಾಗಿರುವ ಸತೀಶ್ ಜಾರಕಿಹೊಳಿ ರಾಜ್ಯ ರಾಜಕಾರಣದಲ್ಲಿ ಪ್ರಭಾವಿ ವ್ಯಕ್ತಿ. ಅಹಿಂದ ವರ್ಗದ ಸಂಘಟನೆಯಲ್ಲಿ ಮುಂಚೂಣಿಯಲ್ಲಿದ್ದರು. ಸಿದ್ದರಾಮಯ್ಯ ಅವರ ಆಪ್ತರಾಗಿದ್ದರು. ಮೂಲತಃ ಉದ್ಯಮಿ ಕೂಡ ಆಗಿದ್ದಾರೆ.**

ಇಲ್ಲಿಯವರೆಗೂ ಸತೀಶ್ ಜಾರಕಿಹೊಳಿ ಅವರ ಸಂಬಂಧಿಕರು, ಆಪ್ತರ ವಿರುದ್ಧ ಇಡಿ ದಾಳಿಗಳು ಹಾಗೂ ತನಿಖೆಗಳು ನಡೆದಿದ್ದವು. ಇದೇ ಮೊದಲ ಬಾರಿಗೆ ಜಾರಿ ನಿರ್ದೇಶನಾಲಯ ನೇರವಾಗಿ ಸತೀಶ್ ಜಾರಕಿಹೊಳಿಯವ–ರಿಗೆ ಸೇರಿದ್ದ ಸ್ಥಳಗಳ ಮೇಲೆ ಮುಗಿಬಿದ್ದಿದೆ. ಇಂದು ಬೆಳಗ್ಗೆ 7 ಗಂಟೆಯಿಂದಲೇ ಜಾರಿ ನಿರ್ದೇಶನಾಲಯದ ದಾಳಿ ಆರಂಭವಾಯಿತು. ಬೆಂಗಳೂರು, ಬೆಳಗಾವಿ, ಗೋಕಾಕ್ ಮತ್ತು ಗೋವಾ ಸೇರಿದಂತೆ 18ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದೆ. ಸುಮಾರು 25ಕ್ಕೂ ಹೆಚ್ಚು ತಂಡಗಳಲ್ಲಿ ಅಧಿಕಾರಿಗಳು ಇಂದು ಮುಂಜಾನೆಯಿಂದಲೇ ಸಜ್ಜುಗೊಂಡು ಎಲ್ಲಾ ಸ್ಥಳಗಳಲ್ಲಿ ಏಕಾಏಕಿ ದಾಳಿ ನಡೆಸಿದ್ದಾರೆ.



ಬೆಂಗಳೂರಿನಲ್ಲಿ ಸತೀಶ್ ಜಾರಕಿಹೊಳಿಯವರ ಸರ್ಕಾರಿ ಬಂಗಲೆ, ಡಾಲರ್ಸ್ ಕಾಲೋನಿ ನಿವಾಸ ಹಾಗೂ ಉದ್ಯಮದ ಕಚೇರಿಗೆ ಸಂಬಂಧಪಟ್ಟ ಸ್ಥಳಗಳಲ್ಲಿ ತಪಾಸಣೆ ನಡೆಸಲಾಗಿದೆ. ಇಂದು ಸಚಿವ ಸಂಪುಟಸಭೆ ನಿಗದಿಯಾಗಿ–ತ್ತು. ಸಂಪುಟದಲ್ಲಿ ಭಾಗವಹಿಸುವ ಸಲುವಾಗಿ ಸತೀಶ್‌ಜಾರಕಿಹೊಳಿ ಬೆಂಗಳೂರಿನಲ್ಲಿದ್ದರು. ಸರ್ಕಾರಿ ನಿವಾಸದಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳನ್ನು ಭೇಟಿ ಮಾಡುತ್ತಿದ್ದರು. ಈ ವೇಳೆ ಆಗಮಿಸಿದ್ದ ಇಡಿ ಅಧಿಕಾರಿಗಳು ಸಚಿವರ ಸಹಕಾರ ಕೋರಿ ತಪಾಸಣೆ ನಡೆಸಿದ್ದಾರೆ. ಬೆಂಗಳೂರಿನಲ್ಲಿ ಒಟ್ಟು 7 ಕಡೆ ದಾಳಿಯಾಗಿದೆ ಎಂದು ಹೇಳಲಾಗಿದೆ. ಬೆಳಗಾವಿ ಜಿಲ್ಲೆಯ ಗೋಕಾಕ್‌ನ ಹಿಲ್ ಗಾರ್ಡನ್‌ನಲ್ಲಿರುವ ಸತೀಶ್ ಜಾರಕಿಹೊಳಿಯವರ ಖಾಸಗಿ ನಿವಾಸದ ಮೇಲೆ ದಾಳಿಯಾಗಿದೆ.

ಬೆಳಗಾವಿ ನಗರದಲ್ಲಿ ಡಾ.ಗಿರೀಶ್ ಸೋನ್ವಾಲ್ಕರ್, ರಾಜು ಧರಗಶೆಟ್ಟಿ, ವಿಠಲ್ ಪರಸನ್ನನವರ ಮನೆ ಹಾಗೂ ಕಚೇರಿ ಸೇರಿ 5 ಕಡೆಗಳಲ್ಲಿ ಶೋಧ ನಡೆದಿದೆ. ಅದೇ ರೀತಿ ಸತೀಶ್ ಜಾರಕಿಹೊಳಿಯವರ ಭಾವ ಮೈದುನ ಆಗಿರುವ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತರಾಗಿದ್ದ ವೈ.ಮಂಜುನಾಥ್ ಅವರ ಮನೆಯ ಮೇಲೆ ಎರಡನೇ ಬಾರಿ ದಾಳಿಯಾಗಿದೆ. ಕಳೆದ ಜೂನ್ 21ರಂದು ವೈ.ಮಂಜುನಾಥ್ ಅವರ ಮನೆ, ಕಚೇರಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಆ ಸಂದರ್ಭದಲ್ಲಿ 176 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ಆಸ್ತಿ ಪತ್ತೆಯಾಗಿದ್ದಾಗಿ ಹೇಳಲಾಗಿ–ತ್ತು. ನಗದು, ಚಿನ್ನಾಭರಣಗಳ ಜೊತೆಗೆ ಕೆಲವು ದಾಖಲೆಗಳು ಪತ್ತೆಯಾಗಿದ್ದವು. ಅವುಗಳ ಮೂಲಕ ಮಂಜುನಾಥ್ ತಮ ಪತ್ನಿಯ ಹೆಸರಿನಲ್ಲಿ ಆಫ್ರಿಕಾದ ರುವಾಂಡದಲ್ಲಿನ ಚಿನ್ನದ ಗಣಿಗಾ–ರಿಕೆಯಲ್ಲಿ ಹೂಡಿಕೆ ಮಾಡಿರುವುದು ತಿಳಿದು ಬಂದಿತ್ತು. ಮಂಜುನಾಥ್ ಅವರ ಪತ್ನಿಯ ಜೊತೆಗೆ ಸತೀಶ್‌ಜಾರಕಿ ಹೊಳಿಯವರ ಪುತ್ರ ರಾಹುಲ್ ಕೂಡ ವಿದೇಶಿ ಹೂಡಿಕೆಯಲ್ಲಿ ಪಾಲುದಾರನಾಗಿರುವುದು ಪತ್ತೆಯಾಗಿತ್ತು. 3.5 ಲಕ್ಷ ರೂ.ಗೂ ಅಧಿಕ ಮೊತ್ತದ ವಿದೇಶಿ ಕರೆನ್ಸಿಗಳು ದೊರೆತಿದ್ದವು.

ಮಂಜುನಾಥ್ ಅವರು ಬಾರ್ ಲೈಸೆನ್ಸ್ ನೀಡುವ ವಿಷಯದಲ್ಲಿ ಹಗರಣ ಮಾಡಿದ್ದಾರೆ ಎಂಬ ಆರೋಪಕ್ಕಾಗಿ ನಡೆದ ಲೋಕಾಯುಕ್ತ ತನಿಖೆ ವರದಿ ಆಧರಿಸಿ ಜಾರಿ ನಿರ್ದೇಶನಾಲಯ ದಾಳಿ ಮಾಡಿತ್ತು.

## ಮೌನೇಶ ದೈಹಿಕ ಶಿಕ್ಷಕ ವಯೋ ನಿವೃತ್ತಿ ಬೀಳ್ಕೊಡುಗೆ: ಮೌನ ಮಿತ್ರ ಯೋಗ ಸಮಿತಿಯಿಂದ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಸರ್ಕಾರಿ ಹಣ್ಣಿನ ತೋಟದಲ್ಲಿ ಮೌನ ಮಿತ್ರ ಯೋಗ ಸಮಿತಿ, ಮಾನ್ವಿ ವತಿಯಿಂದ ಮೌನೇಶ ಪೋತ್ನಾಳ್ ದೈಹಿಕ ಶಿಕ್ಷಕ ಅವರ ವಯೋನಿವೃತ್ತಿ ಬೀಳ್ಕೊಡುಗೆ ಸಮಾರಂಭವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.**



ಕಾರ್ಯಕ್ರಮದಲ್ಲಿ ಮೌನೇಶ ದೈಹಿಕ ಶಿಕ್ಷಕ ಹಾಗೂ ಅವರ ಧರ್ಮಪತ್ನಿಯನ್ನು ಸನ್ಮಾನಿಸಿ, ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು. ಮೌನೇಶ ದೈಹಿಕ ಶಿಕ್ಷಕರ ಬಾಲ್ಯ ಜೀವನ, ವಿದ್ಯಾಭ್ಯಾಸ ಹಾಗೂ ಸುದೀರ್ಘ ಶ್ರಮದ ಜೀವನದ ಕು–ರಿತು ಸಿದ್ದಮಲ್ಲಯ್ಯ ಹಿರೇಮಠ ಅವರು ಕಿರು ಪರಿಚಯ ನೀಡಿದರು. ಹಿರಿಯರಾದ ಶ್ರೀಶೈಲ ಗೌಡ್ರು ಅವರು ಮೌನೇಶ ಅವರ ಯೋಗ ಕ್ಷೇತ್ರದ ಸಾಧನೆ ಹಾಗೂ ಸೇವೆಯನ್ನು ಕುರಿತು ಮಾತನಾಡಿದರು. ಶಂಕರನಂದ ಅವರು ತಮ್ಮ ಯೋಗಾಭ್ಯಾಸದ ಅನುಭವಗಳನ್ನು ಹಂಚಿಕೊಂಡು,ಯೋಗದಿದ ತಮ್ಮ ಜೀವನದಲ್ಲಿ ಉಂಟಾದ ಪ್ರಯೋಜನಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವು ಗಣ್ಯರು ಯೋಗದ ಮಹತ್ವ ಹಾಗೂಯೋಗಾಭ್ಯಾಸದಿದ ದೊರೆಯುವ ಆರೋಗ್ಯಕರ ಪ್ರಯೋಜನಗಳ ಕುರಿತು ಮಾತನಾಡಿದರು. ಮಾಜಿ ಸೈನಿಕರಾದ ಅಮರೇಶ ಅವರು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ನೀಡುವ ಪ್ರಯೋಜನಗಳ ಬಗ್ಗೆ ವಿವರಿಸಿದರು. ಸನ್ಮಾನಿತ ಮೌನೇಶ ದೈಹಿಕ ಶಿಕ್ಷಕ ದಂಪತಿಗಳನ್ನು ಸಾರೋಟಿನಲ್ಲಿ ಮಾನ್ವಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕರೆದುಕೊಂಡು ಹೋಗಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಬೆಳಗಿನ ಉಪಹಾರದ ವ್ಯವಸ್ಥೆಯನ್ನು ನಾಗರಾಜು ಜಿ ಅವರು ನೆರವೇ–ರಿಸಿದರು. ಮೌನ ಮಿತ್ರ ಯೋಗ ಸಮಿತಿಯ ಸರ್ವ ಸದಸ್ಯರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ವಿಜಯಕುಮಾರ ಶಿಕ್ಷಕ ನಿರೂಪಿಸಿದರು. ಶಂಕ್ರಯ್ಯ ವಂದಿಸಿದರು.

# ಜಿಲ್ಲಾ ಕಾರಾಗೃಹದಲ್ಲಿ ಆರೋಗ್ಯ ತಪಾಸಣಾ ಶಿಬಿರ

## ಪ್ರತಿಯೊಬ್ಬರ ಆರೋಗ್ಯ ಸುರಕ್ಷತೆಗಾಗಿ ಕಾಳಜಿ ವಹಿಸುವುದು ಎಲ್ಲರ ಜವಾಬ್ದಾರಿ

❏ ನೈಜ್ಯ ದೆಸೆ ನ್ಯೂಸ್

**ಹುಟ್ಟುತ್ತಲೆ ಯಾರು ಅಪರಾಧಿಗಳಾಗುವುದಿಲ್ಲ, ಆದರೆ ಜೀವನದಲ್ಲಿ ಜರಗುವ ಕೆಲವು ಘಟನೆಗಳು ಅಪರಾಧಿಯಾಗಿಸುತ್ತವೆ, ಆದರೆ ಆ ಕ್ಷಣದ ಸಂಯಮ, ಶಾಂತತೆ ಮತ್ತು ಹಿರಿಯರ ಮಾರ್ಗದರ್ಶನದಿಂದ ನಾವು ಸಮಾಜಮುಖಿಯಾಗಿ ಜೀವನ ನಡೇಸಬಹುದಾಗಿದೆ,**

ಈ ದಿಶೆಯಲ್ಲಿ ತಮಗೆ ಕೈಗೊಂಡಿರುವ ಆರೋಗ್ಯ ತಪಾಸಣೆಯನ್ನು ತಾವೆಲ್ಲರೂ ಸದುಪಯೋಗ ಪಡಿಸಿಕೊಳ್ಳಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಬಂಧಿಖಾನೆ ಇಲಾಖೆ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾರಗೃಹ, ರಿಮ್ಸ್, ಸಹಯೋಗದೊಂದಿಗೆ ಹಮ್ಮಿಕೊಂಡ ಬಂಧಿಗಳ ಆರೋಗ್ಯ ತಪಾಸಣಾ ಶಿಬಿರ ದಲ್ಲಿ ಮಾತನಾಡುತ್ತಾ ಇಂದು ರಕ್ತದೊತ್ತಡ, ಸಕ್ಕರೆ ಖಾಯಿಲೆ ಪತ್ತೆ ಹಚ್ಚುವ, ದಂತ ಸಮಸ್ಯೆಗಳ ಗುರ್ತಿಸುವಿಕೆ, ಕಣ್ಣಿನ ಪರೀಕ್ಷೆ, ಹಾಗೂ ಮಾನಸಿಕ ಆರೋಗ್ಯ ತಪಾಸಣೆ ಹಾಗೂ ಆಪ್ತ ಸಮಾಲೊಚನೆಯ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದರು.




ಅಧ್ಯಕ್ಷತೆ ವಹಿಸಿದ್ದ ಕಾರಗೃಹ ಅಧಿಕ್ಷಕರಾದ ಅನಿತಾ ಹಿರೇಮನಿ ಮಾತನಾಡಿ ತಜ್ಞವೈದ್ಯರ ಬಳಿ ತಮಗೆ ಇರುವ ಆರೋಗ್ಯದ ಸಮಸ್ಯೆಗಳನ್ನು ತಿಳಿಸಿ ತಪಾಸಣೆ ಮಾಡಿಸಿಕೊಳ್ಳಿ, ಅಗತ್ಯವಿರುವವರಿಗೆ ಹೆಚ್ಚಿನ ಚಿಕಿತ್ಸೆಯನ್ನು ನಿಯಮಾನುಸಾರ ಹೆಚ್ಚಿನ ಚಿಕಿತ್ಸೆಯನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ವಿಶ್ವ ಆತ್ಮಹತ್ಯೆ ತಡೆ ದಿನ: ಜೀವನದಲ್ಲಿ ಜರಗುವ ದುಃಖ, ಹತಾಶೆ, ಆವೇಶ, ಕೋಪ, ವ್ಯಸನ, ಮುಂತಾದವುಗಳನ್ನು ಸವಾಧಾನದಿಂದ ಎದುರಿಸಲು ಹಾಗೂ ಈ ಸಂಧರ್ಭಗಳಲ್ಲಿ ಆತ್ಮಹತ್ಯೆ ಯಂತಹ ದುಡಿಕಿನ ನಿರ್ದಾರಗಳನ್ನು ತೆಗೆದುಕೊಳ್ಳಬಾರದು ಎಂದು ಮಾನೋರೋಗ ತಜ್ಞರಾದ ಡಾ ಮನೋಹರ ಪತ್ತಾರ ತಿಳಿಸಿದರು. ಶಿಬಿರಲ್ಲಿ 200 ಹೆಚ್ಚು ಜನರ ತಪಾಸಣೆ ಮಾಡಲಾಯಿತು. 24 ಕಣ್ಣಿನ ತಪಾಸಣೆ, 32 ದಂತ ತಪಾಸಣೆ, 70 ಮಧುಮೇಹ, ರಕ್ತದೊತ್ತಡ ತಪಾಸಣೆ, 31 ಸಾಮಾನ್ಯ ತಪಾಸಣೆ ಮಾಡಿಸಿಕೊಂಡರು.


ಈ ಸಂಧರ್ಭದಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ ಸತೀಶ್, ದಂತ ಕಾರ್ಯಕ್ರಮ ಅಧಿಕಾರಿ, ಡಾ ಶೀತಲ್, ತಜ್ಞ ವೈದ್ಯರಾದ ಡಾ ಭಾಷಿತ್ ಲತೀಫ್, ಡಾ ನವೀನ್, ಕಾರಗೃಹ ವೈದ್ಯರಾದ ಡಾ ರಾಜ–ಕುಮಾರ್, ದಂತ ತಜ್ಞೆ ಡಾ ಮಂಜುಳಾ, ಜೈಲರ್ ಐ, ಎಸ್ ಹಿರೇಮಠ, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಡಿವೈಡಿಹೆಚ್‌ಇಓ ಬಸಯ್ಯ, ಜಿಲ್ಲಾ ಹಿರಿಯ ಆರೋಗ್ಯ ಮೇಲ್ವಿಚಾರಕ ಪುಂಡಲೀಕ ಗಂಜಿ, ಆರಬಿ–ಎಸ್‌ಕೆಯ ಡಾ ಸುಗೂರಯ್ಯಸ್ವಾಮಿ, ಡಾ ಅಕ್ಬರ್ ಹುಸೇನಿ, ಡಾ ಆರತಿ, ಡಾ ಸಂಧ್ಯಾ, ಎನ್‌ಸಿಡಿಯ ಡಾ ಮೇಘಾ ರೆಡ್ಡಿ, ತಂಬಾಕು ಕಾರ್ಯಕ್ರಮ ಪ್ರಿಯಾಂಕಾ, ಔಷದಾಧಿಕಾರಿ ಹಾಜಿ ಮಲಂಗ್, ಹಿರಯ ಹೆಚ್‌ಐಓ ಸುರೇಶ್ ಸೇರಿದಂತೆ ಮಾನಸಿಕ ಆರೋಗ್ಯ, ದಂತ ಆರೋಗ್ಯ, ಎನ್‌ಸಿಡಿ ವಿಭಾಗ, ನೇತ್ರ ವಿಭಾಗದ ಸಿಬ್ಬಂದಿಯರು, ಜೈಲು ಸಿಬ್ಬಂದಿಯವರು ಹಾಗೂ ಇತರರು ಉಪಸ್ಥಿತರಿದ್ದರು.

# ಭಾರತರತ್ನ ವಿಜ್ಞಾನಿ ಪ್ರೊ. ಸಿ.ಎನ್.ಆರ್.ರಾವ್‌ಗೂ ಎಸ್‌ಐಆರ್ ನೋಟೀಸ್

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕರ್ನಾಟಕದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಉಂಟಾದ ಕಾಗುಣಿತ ವ್ಯತ್ಯಾಸದಿಂದಾಗಿ ಭಾರತ ರತ್ನ ಪುರಸ್ಕೃತ ಖ್ಯಾತ ವಿಜ್ಞಾನಿ ಪ್ರೊ. ಸಿ.ಎನ್.ಆರ್. ರಾವ್ ಅವರಿಗೆ ಚುನಾವಣಾ ಆಯೋಗ ನೋಟಿಸ್ ಜಾರಿ ಮಾಡಿದೆ.**

ಹಳೆಯ ಮತದಾರರ ಪಟ್ಟಿ ಹಾಗೂ ಪ್ರಸ್ತುತ ಕರಡು ಪಟ್ಟಿಯಲ್ಲಿರುವ ಹೆಸರಿನ ಕಾಗುಣಿತದಲ್ಲಿ ವ್ಯತ್ಯಾಸ ಕಂಡುಬಂದಿರುವುದೇ ಸ್ವಯಂ ಹೆಸರು ಹೊಂದಾಣಿಕೆಯಾಗದಿರಲು ಕಾರಣ ಎಂದು ಗುರುತಿಸಲಾಗಿದೆ. ಹೆಸರಿನಲ್ಲಿ ಹೆಚ್ಚುವರಿ 'ಎಫ್' ಅಕ್ಷರ ಸೇರ್ಪಡೆಯಾಗಿರುವುದ–ರಿಂದ ಈ ವ್ಯತ್ಯಾಸ ಉಂಟಾಗಿದೆ ಎಂದು ತಿಳಿದುಬಂದಿದೆ.ಈ ಹಿನ್ನೆಲೆಯಲ್ಲಿ ಮಲ್ಲೇಶ್ವರಂನಲ್ಲಿ ನಿಗದಿಪಡಿಸಿರುವ ವಿಚಾರಣೆಗೆ ಖುದ್ದಾಗಿ ಹಾಜರಾಗುವಂತೆ 92 ವರ್ಷದ ಹಿರಿಯ ವಿಜ್ಞಾನಿ ಸಿ.ಎನ್.ಆರ್. ರಾವ್ ಅವರಿಗೆ ಸೂಚಿಸಲಾಗಿದೆ. ಲಕ್ಷಾಂತರ ಮತದಾರರ ವಿವರಗಳ ಪರಿಶೀಲನೆ



ಚುನಾವಣಾ ಆಯೋಗದ ಎಸ್‌ಐಆರ್ ಪ್ರಕ್ರಿಯೆಯಡಿ ಹಿಂದಿನ ಮತದಾರರ ಪಟ್ಟಿಯಲ್ಲಿನ ವಿವರಗಳನ್ನು ಪ್ರಸ್ತುತ ದಾಖಲೆಗಳೊಂದಿಗೆ ಹೊಂದಾಣಿಕೆ ಮಾಡಲಾಗುತ್ತಿದೆ.

ಹಳೆಯ ದಾಖಲೆಗಳು ಹಾಗೂ ಪ್ರಸ್ತುತ ಮಾಹಿತಿಯಲ್ಲಿ ಹೆಸರು ಅಥವಾ ಇತರ ವಿವರಗಳಲ್ಲಿ ವ್ಯತ್ಯಾಸ ಕಂಡುಬಂದರೆ, ಅಂತಹ ಮತದಾರರಿಗೆ ಸ್ಪಷ್ಟೀಕರಣ ನೀಡುವಂತೆ ನೋಟಿಸ್ ಜಾರಿಗೊಳಿಸಲಾಗುತ್ತಿದೆ.ಚುನಾವಣಾ ಆಯೋಗದ ಎಸ್‌ಐಆರ್ ಪೋರ್ಟಲ್‌ನಲ್ಲಿಯೂ ಹಳೆಯ ಎಸ್‌ಐಆರ್ ವಿವರಗಳು ಹಾಗೂ ಪ್ರಸ್ತುತ ವಿವರಗಳ ನಡುವೆ ಹೆಸರಿನ ಕಾಗುಣಿತದಲ್ಲಿ ವ್ಯತ್ಯಾಸ ಉಂಟಾಗುವ ಸಾಧ್ಯತೆಯನ್ನು ಉಲ್ಲೇಖಿಸಲಾಗಿದೆ. ಕರ್ನಾಟಕದಲ್ಲಿ ಈ ಪ್ರಕ್ರಿಯೆಯಡಿ ಮ್ಯಾಪಿಂಗ್ ಆಗದಿರುವುದು ಸೇರಿದಂತೆ ವಿವಿಧ ಅಸಂಗತತೆಗಳಿಗಾಗಿ ಲಕ್ಷಾಂತರ ಮತದಾರರ ವಿವರಗಳನ್ನು ಪರಿಶೀಲಿಸಲಾಗುತ್ತಿದೆ. ರಾಜ್ಯದ ಮುಖ್ಯ ಚುನಾವಣಾಧಿಕಾರಿ ಕಚೇ–ರಿಯ ಪ್ರಕಾರ, ಇಂತಹ ಪ್ರಕರಣಗಳಲ್ಲಿ ಒಟ್ಟು 43,81,141 ನೋಟಿಸ್‌ಗಳನ್ನು ಸೃಷ್ಟಿಸಲಾಗಿದೆ.

ಪ್ರೊ. ಸಿ.ಎನ್.ಆರ್. ರಾವ್ ಯಾರು?

ಪ್ರೊ. ಸಿ.ಎನ್.ಆರ್. ರಾವ್ ಅವರು ಘನ–ಸ್ಥಿತಿ ಹಾಗೂ ರಚನಾತ್ಮಕ ರಸಾಯನಶಾಸ್ತ್ರ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಸಂಶೋಧನೆ ನಡೆಸಿ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.ಬೆಂಗಳೂ–ರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐ–ಎಸ್‌ಸಿ) ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಅವರು, ಜಕ್ಕೂರಿನಲ್ಲಿ ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್ (ಜೆಎನ್‌ಸಿಎಎಸ್‌ಆರ್) ಸಂಸ್ಥೆಯನ್ನು ಸ್ಥಾಪಿಸಿ, ಅದರ ಸ್ಥಾಪಕ ಅಧ್ಯಕ್ಷರಾಗಿದ್ದರು. ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಎಚ್.ಡಿ. ದೇವೇಗೌಡ, ಐ.ಕೆ. ಗುಜ್ರಾಲ್ ಹಾಗೂ ಮನಮೋಹನ್ ಸಿಂಗ್ ಸೇರಿದಂತೆ ಐವರು ಪ್ರಧಾನಮಂತ್ರಿಗಳ ವೈಜ್ಞಾನಿಕ ಸಲಹಾ ಮಂಡಳಿಯ ನೇತೃತ್ವ ವಹಿಸಿದ್ದ ಅವರು, ದೇಶದ ವಿಜ್ಞಾನ ನೀತಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ಪಡೆದ ಮೂರನೇ ವಿಜ್ಞಾನಿಯಾಗಿರುವ ಸಿ.ಎನ್.ಆರ್. ರಾವ್, ಪದ್ಮವಿಭೂಷಣ, ಪದ್ಮಶ್ರೀ ಹಾಗೂ 'ಕರ್ನಾಟಕ ರತ್ನ' ಸೇರಿದಂತೆ ಹಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಕೇವಲ ಹೆಸರಿನ ಕಾಗುಣಿತ ವ್ಯತ್ಯಾಸದಿಂದ ದೇಶದ ಗಣ್ಯ ವಿಜ್ಞಾನಿಯೊಬ್ಬರಿಗೆ ಚುನಾವಣಾ ಆಯೋಗದ ನೋಟಿಸ್ ಜಾರಿಯಾಗಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

## ವಚನ ದರ್ಶನ

ಪಾತಕ ಶತಕೋಟಿಯನೊರಸಲು ಸಾಲದೆ ಒಂದು ಶಿವನ ನಾಮ?ಸಾಲದೆ ಒಂದು ಹರನ ನಾಮ ಕೂಡಲಸಂಗಮದೇವಾ, ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ

"ಪಾತಕ ಶತಕೋಟಿ" ಎಂಬ ಪದಗುಚ್ಛವು ವಿಶ್ವಗುರು ಬಸವಣ್ಣನವರ ಪ್ರಸಿದ್ಧ ವಚನವೊಂದರ ಭಾಗವಾಗಿದೆ.
ಪಾತಕ.ಮಹಾಪಾಪ ಅಥವಾ ತಪ್ಪು.ಶತಕೋಟಿ.ನೂರು ಕೋಟಿ (ಅನಂತ ಅಥವಾ ಅಸಂಖ್ಯಾತ).ಒರಸಲು. ಅಳಿಸಿಹಾಕಲು ಅಥವಾ ನಾಶಮಾಡಲು.ಉಂಡಿಗೆ. ಒಡೆಯನ ಮುದ್ರೆ (ಇಲ್ಲಿ ಲಿಂಗದ ಮುದ್ರೆ ಅಥವಾ ದೀಕ್ಷೆ).ಪಶು.ಪ್ರಾಣಿ ಅಥವಾ ಇಲ್ಲಿ ಭಗವಂತನಿಗೆ ಸಂಪೂರ್ಣವಾಗಿ ಶರಣಾದ ಜೀವಾತ್ಮ.

ಮನುಷ್ಯನು ಅರಿತೋ ಅಥವಾ ಅರಿಯದೆಯೋ ಮಾಡಿರುವ ನೂರು ಕೋಟಿ ಪಾಪಗಳನ್ನು (ಅಸಂಖ್ಯಾತ ತಪ್ಪುಗಳನ್ನು) ತೊಳೆದುಹಾಕಲು ಭಗವಂತನಾದ ಆ ಶಿವನ ಅಥವಾ ಹರನ ಒಂದು ನಾಮಸ್ಮರಣೆ ಸಾಲದೇ? ಖಂಡಿತವಾಗಿಯೂ ಸಾಕು ಎಂದು ಬಸವಣ್ಣನವರು ಇಲ್ಲಿ ಪ್ರತಿಪಾದಿಸುತ್ತಾರೆ.ಮುಂದುವರಿಯುವುದು,
"ಎಲೈ ಕೂಡಲಸಂಗಮದೇವನೇ, ನಾನು ನಿನ್ನ ಲಿಂಗದ ಮುದ್ರೆಯನ್ನು ಧರಿಸಿದ ನಿನ್ನದೇ ಮನೆಯ ಆಕಳು ಪಶುವಾಗಿದ್ದೇನೆ. ನನ್ನ ಒಡೆಯನಾದ ನೀನು ನನ್ನನ್ನು ಸಲಹುವಾಗ, ನನ್ನ ಪಾಪಗಳ ಬಗ್ಗೆ ನನಗೆ ಭಯವೇಕೆ?" ಎಂಬ ನಂಬಿಕೆ ಮತ್ತು ಭಕ್ತಿಯ ಶರಣಾಗತಿಯ ಭಾವ ಈ ವಚನದಲ್ಲಿದೆ. ಭಗವಂತನ ನಾಮಸ್ಮರಣೆಗೆ ಮತ್ತು ಕರುಣೆಗೆ ಅಪಾರವಾದ ಶಕ್ತಿಯಿದೆ ಎಂಬುದನ್ನು ಇದು ತಿಳಿಸುತ್ತದೆ.ನಿಮಗೆ ಈ ವಚನದ ಹೆಚ್ಚಿನ ವಿಶ್ಲೇಷಣೆ ಬೇಕೇ ಅಥವಾ ಬೇರೆ ಯಾವುದಾದರೂ ವಚನದ ಅರ್ಥ ತಿಳಿಯಬೇಕಾಗಿದೆಯೇ? ತಿಳಿಸಿ, ನಾನು ಸಹಾಯ ಮಾಡುತ್ತೇನೆ. ಈ ವಚನದಿಂದ ಜೀವನ ಪಾವನಗೊಳಿಸಿಕೊಳ್ಳೋಣ.
ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ಅರಣ್ಯ ಅಧಿಕಾರಿ ಸುಭಾಷ ಚಂದ್ರ ಮೇಲೆ ಸುಳ್ಳು ಆರೋಪ – ನಾಯಕರ ಒಕ್ಕೂಟ ಖಂಡನೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕು ಅರಣ್ಯ ಅಧಿಕಾರಿ ಸುಭಾಷಚಂದ್ರ ನಾಯಕ್ ಅವರ ಮೇಲೆ ಕೇಳಿಬಂದಿರುವ ವಿನಾಕಾರಣ ಮತ್ತು ಆಧಾರರಹಿತ ಆರೋಪಗಳನ್ನು ಸುಳ್ಳು ಆರೋಪವೆಂದು ಕರ್ನಾಟಕ ನಾಯಕರ ಒಕ್ಕೂಟ ( ರಿ ) ಸಹಾಯಕ ಆಯುಕ್ತರ ಮೂಲಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಮನವಿಯನ್ನು ಸಲ್ಲಿಸಿದರು .




ಸುಭಾಷಚಂದ್ರ ನಾಯಕ್ ಅವರು ನಿಷ್ಠಾವಂತ ಮತ್ತು ಪ್ರಾಮಾಣಿಕ ಅಧಿಕಾರಿಯಾಗಿದ್ದು, ಅರಣ್ಯ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಸದಾ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಕಾಡಿನಲ್ಲಿ ವನ್ಯಜೀವಿ ಬೇಟೆಯಾಡುವವರು, ಕಾಡು ನಾಶ ಮಾಡುವವರು, ಅರಣ್ಯ ಭೂಮಿ ಒತ್ತುವರಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಪ್ರಕರಣ ದಾಖಲಿಸಿದ್ದಾರೆ. ಕಸಬಾ ಲಿಂಗಸಗೂರು ವ್ಯಾಪ್ತಿಯಲ್ಲಿ ಸಾಲುಮರದ ತಿಮ್ಮಕ್ಕನ ಉದ್ಯಾನವನ ಅಭಿವೃದ್ಧಿ ಪಡಿಸಿದ್ದಾರೆ. ಹೀಗೆ ದಣಿವರಿಯದೆ ಕೆಲಸ ಮಾಡುತ್ತಿರುವ ಪ್ರಾಮಾಣಿಕ ಅಧಿಕಾರಿ ಮೇಲೆ ಇಲಾಖೆಗೆ ಬಂದ ಅನುದಾನ ದುರುಪಯೋಗ ಮಾಡಿದ್ದಾರೆಂದು ಸತ್ಯಕ್ಕೆ ದೂರವಾದ ಆರೋಪ ಮಾಡಲಾಗುತ್ತಿದೆ ಎಂದು ಆರೋಪಿಸಲಾಗಿದೆ. ಇಂತಹ ಸುಳ್ಳು ಆರೋಪಗಳಿಂದಾಗಿ ಅಧಿಕಾರಿಗಳು ನಿಯತ್ತಾಗಿ ಕೆಲಸ ಮಾಡಲು ಹಿಂಜರಿಯುವಂತಾಗಿದೆ. ಒಂದು ಸುಳ್ಳನ್ನು ಸಾವಿರ ಸಲ ಹೇಳಿ ಸತ್ಯವೆಂದು ಒಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಅಧಿಕಾರಿ ತೊಳಲಾಡುತ್ತಿದ್ದು, ಅವರಿಗೆ ಏನಾದರೂ ಅನಾಹುತವಾದರೆ ಅವರ ಕುಟುಂಬದ ಗತಿ ಏನು ಎಂದು ಒಕ್ಕೂಟ ಪ್ರಶ್ನಿಸಿದೆ. ಆದ್ದರಿಂದ ಮೇಲಾಧಿಕಾರಿಗಳು ಸುಳ್ಳು ಆರೋಪಗಳಿಗೆ ಮಹತ್ವ ನೀಡದೆ, ದಕ್ಷ ಅಧಿಕಾರಿಯಾದ ಸುಭಾಷಚಂದ್ರ ನಾಯಕ್ ಅವರಿಗೆ ಉತ್ತಮ ಕೆಲಸ ಮಾಡಲು ಅವಕಾಶ ಕಲ್ಪಿಸಿ, ಮಾನಸಿಕವಾಗಿ ನೊಂದಿರುವ ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ತಾಲೂಕು ಕರ್ನಾಟಕ ನಾಯಕರ ಒಕ್ಕೂಟ ಒತ್ತಾಯಿಸಿದೆ. ಈ ಸಂದರ್ಭದಲ್ಲಿ ಮಹಾಂತೇಶ್, ಸಂಗಣ್ಣ, ಅಂಜಿ ನಾಯಕ, ತಿಮ್ಮನಗೌಡ, ಮೌನೇಶ್ ಬಸವರಾಜ ಈರಪ್ಪ , ಹನಮಂತ, ಹುಲಗಪ್ಪ, ಬೋದುನಾಯ್ಕ್ ಸೇರಿದಂತೆ ಇತರರು ಇದ್ದರು .

# ಪಂಜಾಬ್‌ನ ಎಎಪಿ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಮಾದಕ ವಸ್ತುಗಳ ನಿರಂತರ ಪೂರೈಕೆ ಕುರಿತು ಪ್ರಶ್ನಿಸಿದ್ದ ಗ್ರಾಮಸ್ಥರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಂಜಾಬ್‌ನ ಆಮ್ ಆದ್ಮಿ ಪಕ್ಷದ (ಎಎಪಿ) ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಹಣಕಾಸು ಸಚಿವ ಹರ್ಪಾಲ್ ಚೀಮಾ ಅವರ ವಿರುದ್ಧದ ಆರೋಪಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಕೂಡಲೇ ಸಚಿವರ ರಾಜೀನಾಮೆ ಪಡೆಯಬೇಕು ಹಾಗೂ ಪ್ರಕರಣದ ಬಗ್ಗೆ ಸ್ವತಂತ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.**

ತಮ್ಮ ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ರಾಹುಲ್ ಗಾಂಧಿ, "ಎಎಪಿ ಸರ್ಕಾರದ ಅಡಿಯಲ್ಲಿ ಅಪಾಯಕಾರಿ ಮಾದ–



ರಿಯೊಂದು ಹೊರಹೊಮ್ಮುತ್ತಿದೆ. ಸರ್ಕಾರದ ವೈಫಲ್ಯಗಳನ್ನು ಪ್ರಶ್ನಿಸಿದರೆ, ಬೆದರಿಕೆ ಮತ್ತು ಚಿತ್ರಹಿಂಸೆಯ ರೂಪದಲ್ಲಿ ಪ್ರತಿಕ್ರಿಯೆ ಬರುತ್ತಿದೆ" ಎಂದು ಆರೋಪಿಸಿದ್ದಾರೆ. ವಿಷ ಸೇವಿಸಿ ಗ್ರಾಮಸ್ಥ ಸಾವು ಸಂಗ್ರೂರ್ ಜಿಲ್ಲೆಯ ದಿರ್ಬಾ ನಿವಾಸಿ 47 ವರ್ಷದ ದಲಿತ ಗುಲ್ಜಾರ್ ಸಿಂಗ್ ಸೋಮವಾರ ರಾತ್ರಿ ವಿಷ ಸೇವಿಸಿ ಮೃತಪಟ್ಟಿದ್ದಾರೆ.

ಸೆಪ್ಟೆಂಬರ್ 6ರಂದು ದಿರ್ಬಾದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹಣಕಾಸು ಸಚಿವ ಹರ್ಪಾಲ್ ಚೀಮಾ ಅವರನ್ನು ಆ ಪ್ರದೇಶದಲ್ಲಿ ನಡೆಯುತ್ತಿರುವ ಮಾದಕ ವಸ್ತುಗಳ ಪೂರೈಕೆ ಕುರಿತು ಗುಲ್ಜಾರ್ ಸಿಂಗ್ ಪ್ರಶ್ನಿಸಿದ್ದರು ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. "ತಮ್ಮ ಮಗ ಮಾದಕ ವಸ್ತುಗಳಿಗೆ ಬಲಿಯಾಗುವುದನ್ನು ನೋಡಬೇಕಾದ ಗುಲ್ಜಾರ್ ಸಿಂಗ್, ಹಣಕಾಸು ಸಚಿವರನ್ನು ಸರ್ಕಾರ ಮಾದಕ ವಸ್ತುಗಳ ವ್ಯಾಪಾರವನ್ನು ತಡೆಯುವಲ್ಲಿ ಏಕೆ ವಿಫಲವಾಗಿದೆ ಎಂದು ಪ್ರಶ್ನಿಸಿದ್ದರು. ಇದಕ್ಕಾಗಿ ಅವರನ್ನು ಚಿತ್ರಹಿಂಸೆಗೊಳಿಸಲಾಯಿತು, ಅವಮಾನಿಸಲಾಯಿತು ಹಾಗೂ ಕ್ಷಮೆಯಾಚಿಸುವಂತೆ ಒತ್ತಡ ಹೇರಲಾಯಿತು.

ಬಳಿಕ ಅವರು ವಿಷ ಸೇವಿಸಿದರು" ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಚಿಕಿತ್ಸೆಗಾಗಿ ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಅಲೆದಾಡಿದರೂ ಸೂಕ್ತ ಚಿಕಿತ್ಸೆ ದೊರೆಯದೆ ಅಂತಿಮವಾಗಿ ಗುಲ್ಜಾರ್ ಸಿಂಗ್ ಮೃತಪಟ್ಟರು ಎಂದು ಅವರು ಹೇಳಿದ್ದಾರೆ. ಪ್ರಶ್ನಿಸುವವರನ್ನು ತುಳಿಯುವುದು ಸರ್ಕಾರದ ಕೆಲಸವಲ್ಲ "ಕಳೆದ ವಾರ ಮುಖ್ಯಮಂತ್ರಿ ಭಗವಂತ್ ಮಾನ್ ವಿರುದ್ಧ ಪ್ರತಿಭಟನೆ ನಡೆಸಿದ್ದಕ್ಕಾಗಿ ಚಿತ್ರಹಿಂಸೆಗೊಳಗಾದ ಯುವಕ ಮೋಹನ್‌ಜೀತ್ ಸಿಂಗ್ ಅವರೊಂದಿಗೆ ನಾನು ಮಾತನಾಡಿದ್ದೆ. ಸರ್ಕಾರದ ಕೆಲಸ ಜನರಿಗೆ ಉತ್ತರಿಸುವುದೇ ಹೊರತು, ಪ್ರಶ್ನಿಸುವವರನ್ನು ತುಳಿಯುವುದಲ್ಲ" ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಗುಲ್ಜಾರ್ ಸಿಂಗ್ ಅವರ ಕುಟುಂಬಕ್ಕೆ ಸಾಧ್ಯವಾದಷ್ಟು ಬೇಗ ನ್ಯಾಯ ದೊರೆಯಬೇಕು ಎಂದು ಒತ್ತಾಯಿಸಿರುವ ಅವರು, ಮುಖ್ಯಮಂತ್ರಿ ಭಗವಂತ್ ಮಾನ್ ಅವರು ತಕ್ಷಣವೇ ಹಣಕಾಸು ಸಚಿವ ಹರ್ಪಾಲ್ ಚೀಮಾ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.


# ಚುಟುಕು ಬ್ರಹ್ಮ ದಿನಕರದೇಸಾಯಿ ಅವರ 117 ನೇ ಜನ್ಮದಿನ

ನೈಜ್ಯ ದೆಸೆ ನ್ಯೂಸ್

**ನನ್ನದೇಹದ ಬೂದಿ ಗಾಳಿಯಲಿ ತೂರಿ ಬಿಡಿ ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ ಬೂದಿ ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ ಧನ್ಯವಾಯಿತು ಹುಟ್ಟು ಸಾವಿನಲ್ಲಿ ಈ ಹಾಡಿನೊಂದಿಗೆ ಪ್ರಖ್ಯಾತಿಯನ್ನು ಹೊಂದಿದ ದಿನಕರ ದೇಸಾಯಿಯವರು ಕರಾವಳಿ ಜಿಲ್ಲೆಯಾದ ಉತ್ತರಕನ್ನಡದ ಕುಮಟಾ ತಾಲೂಕಿನ ಹೊನ್ನಕೇರಿಯಲ್ಲಿ 1909 ಸಪ್ಟೆಂಬರ್ 10 ರಂದು ದತ್ತಾತ್ರೆಯ ದೇಸಾಯಿ ಹಾಗೂ ಅಂಬಿಕಾ ದೇಸಾಯಿ ದಂಪತಿಗಳ ಮಗನಾಗಿ ಜನಿಸಿದರು.**

ಬಾಲ್ಯ ಜೀವನವನ್ನು ಅಲಗೇರಿಯಲ್ಲಿ ಕಳೆದರು. ಬಾಲ್ಯದ ಶಿಕ್ಷಣವನ್ನು ಅಲಗೇರಿಯಲ್ಲಿ ಮುಗಿಸಿ ಎಡ್ವರ್ಡ್ ಹೈಸ್ಕೂಲಿನಲ್ಲಿ ಓದಿ ಆ ಮೇಲೆ ಕಾರವಾರದ ಸರಕಾರಿ ಹೈಸ್ಕೂಲನ್ನು ಸೇರಿ ತಮ್ಮ ಮ್ಯಾಟ್ರಿಕ್ಯೂಲೇಷನ್ ಪಾಸು ಮಾಡಿದರು. ಬೆಂಗಳೂರಿನಲ್ಲಿ ಇಂಟರ್‌ಮಿಡಿಯೇಟ್ ಕಲಿಯುತ್ತಿದ್ದ ಸಂದರ್ಭದಲ್ಲಿ ವೀ. ಸೀತಾರಾಮಯ್ಯನವರು ದಿನಕರ ದೇಸಾಯಿಯವರ ಗುರುಗಳಾಗಿದ್ದರು. ಮುಂದೆ ಹೆಚ್ಚಿನ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದಾಗ ಅಲ್ಲಿ ಅವರಿಗೆ ಉತ್ತಮ ಶಿಕ್ಷಕರ ಸಾನಿಧ್ಯ ದೊರೆಯಿತು. ತೀ.ನಂ.ಶ್ರೀ ಹಾಗೂ ಟಿ.ಎಸ್. ವೆಂಕಣ್ಣಯ್ಯ ಮೊದಲಾದ ಕನ್ನಡ ಸಾಹಿತ್ಯದ ಘಟಾನುಘಟಿಗಳು ಗುರುಗಳಾಗಿ ದೊರಕಿ ಅವರಲ್ಲಿ ಸುಪ್ತವಾಗಿದ್ದ ಕನ್ನಡಾಭಿಮಾನ ಹಾಗೂ ಕಾವ್ಯಕ್ರಿಯೆ ಉದ್ದೀಪನವಾಗಲು ಸಹಾಯಕವಾಯಿತು.

1931 ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪಾಸಾಗುವುದರ ಜೊತೆಗೆ ಕ್ಯಾಂಡಿ ಪಾರಿತೋಷಕವನ್ನು ಪಡೆದುಕೊಂಡರು. ಕಾಲೇಜಿನ ಅಧ್ಯಾಪಕರಲ್ಲಿ ಮದ್ರಾಸಿನವರಾದ ವೆಂಕಟೇಶ್ವರ ಅಯ್ಯರ ಅವರನ್ನು ತುಂಬಾ ಮೆಚ್ಚಿಕೊಂಡಿದ್ದರು. ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರ ಕಾರವಾರದ ಹಿಂದೂ ಹೈಸ್ಕೂಲಿನಲ್ಲಿ ಶಿಕ್ಷಕರಾಗಲು ಅವರಿಗೆ ಕರೆ ಬಂದಿತು. ಆದರೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರು ನೌಕರಿಗೆ ಸೇರಲಿಲ್ಲ. ಎಂ.ಎ. ವ್ಯಾಸಂಗ ಮಾಡಲು ಮುಂಬಯಿಗೆ ಹೋದರು ಆಗಿನ ಸಮಯದಲ್ಲಿ ಎಂ.ಎ. ಅಧ್ಯಯನಕ್ಕೆ ಎರಡು ವಿಧಾನಗಳಿದ್ದವು ಅವುಗಳೆಂದರೆ ಎಂ.ಎ. ವಿಷಯದಲ್ಲಿ ಪಠ್ಯಕ್ರಮವನ್ನು ಅಭ್ಯಾಸ ಮಾಡಿ ಪರೀಕ್ಷೆಗೆ ಕೂಡುವುದು ಅಥವಾ ಸ್ನಾತಕೋತ್ತರ ಪದವಿ ಪಡೆಯುವ



ವಿಷಯದಲ್ಲಿ ಯಾವುದಾದರೊಂದು ವಸ್ತುವನ್ನು ಆಯ್ಕೆಮಾಡಿಕೊಂಡು ಮಹಾ ಪ್ರಬಂಧವನ್ನು ಮಂಡಿಸುವುದು.

ಆ ಸಂದರ್ಭದಲ್ಲಿ ನೇರವಾಗಿ ಪರೀಕ್ಷೆಗೆ ಕೂಡ್ರದೆ ಮಹಾ ಪ್ರಬಂಧವನ್ನು ಮಂಡಿಸಲು ಸಿದ್ದರಾಗಿ ಅಂದಿನ ಹೆಸರಾಂತ ಶ್ರೇಷ್ಠ ಇತಿಹಾಸಕರರಾಗಿದ್ದ ಫಾದರ್ ಹೆರಾಸ್ ಅವರ ಮಾರ್ಗದರ್ಶನದಲಿ 'ಕಲ್ಯಾಣ ಚಾಲುಕ್ಯರ ಆಡಳಿತದಲ್ಲಿ ಮಂಡಲೇಶ್ವರರು' ಮಹಾ ಪ್ರಬಂಧವನ್ನು ಮಂಡಿಸಿ ಎಂ.ಎ. ಪದವಿ ಪಡೆದುಕೊಳ್ಳುವುದರ ಜೊತೆಗೆ ಮಹಾ ಪ್ರಬಂಧಕ್ಕೆ ರಜತ ಪದಕ ಪಡೆದುಕೊಂಡರು. ಅದೇ ಸಂದರ್ಭದಲ್ಲಿ ಸಂಜೆ ಕಾಲೇಜಿನಲ್ಲಿ ಎಲ್.ಎಲ್.ಬಿ ವ್ಯಾಸಂಗ ಮಾಡಿ ಮುಗಿಸಿದರು. ದಿನಕರ ದೇಸಾಯಿಯವರಿಗೆ ನೌಕರಿಗಿಂತಲೂ ಸಾರ್ವಜನಿಕ ಜೀವನದಲ್ಲಿ ಆಸಕ್ತಿ ಇದ್ದುದರಿಂದ 'ಭಾರತ ಸೇವಕ ಸಮಾಜ' ಸೇರಿದರು. 1936 ಜುಲೈ 2 ರಂದು ಧಾರವಾಡದ ವಾಮನ್‌ರಾವ್ ದೇಸಾಯಿಯವರ ಬಂಗಲೆಯಲ್ಲಿ ಇಂದಿರಾ ಅವರನ್ನು ಕೇವಲ ಹದಿಮೂರು ರೂಪಾಯಿ ಖರ್ಚು ಮಾಡಿ ಸರಳವಾದ ರೀತಿಯಲ್ಲಿ ರಜಿಸ್ಟರ್ ಮದುವೆಯಾದರು.

ದಿನಕರ ದೇಸಾಯಿಯವರು ಸ್ವತ: ಕವಿಗಳಾಗಿದ್ದರಲ್ಲದೆ, ಸಾಹಿತಿಗಳನ್ನು ಸ್ನೇಹಿತರನ್ನಾಗಿ ಮಾಡಿಕೊಂಡಿದ್ದರು. ಅವರಿಗೆ ಬಿ.ಎಂ. ಶ್ರೀಕಂಠಯ್ಯ, ವೀ.ಸೀತಾರಮಯ್ಯ, ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ. ಗೋಕಾಕ ಮೊದಲಾದವರ ಮೇಲೆ ಗೌರವವಿತ್ತು. ಡಾ.ಶಿವರಾಮ ಕಾರಾಂತ, ಶಂಬಾ ಜೋಶಿ, ರಂಗನಾಥ ದಿವಾಕರ, ಖಾದ್ರಿ ಶಾಮಣ್ಣ , ಬಸವರಾಜ ಕಟ್ಟೀಮನಿ, ಚನ್ನವೀರ ಕಣವಿ ಸದಾಶಿವ ಒಡೆಯರ, ಆರ್.ಸಿ.ಹಿರೇಮಠ, ಪಾಟೀಲ ಪುಟ್ಟಪ್ಪ, ಯಶವಂತ ಚಿತ್ತಾಲ್, ಗೌರೀಶ ಕಾಯ್ಕಿಣಿ, ಆನಂದ ವರ್ಟಿ, ರಂ.ಶ್ರೀ ಮುಗಳಿ ಮುಂತಾದವರು ಸಾಹಿತಿ ಮಿತ್ರರಾಗಿದ್ದರು. ದಿನಕರ ಅವರು ಕನ್ನಡ, ಇಂಗ್ಲೀಷ ಹಾಗೂ ಕೊಂಕಣಿ ಭಾಷೆಗಳಲ್ಲಿ 12 ಕೃತಿಗಳನ್ನು ಹೊರತಂದಿದ್ದು ದಿನಕರ ಚೌಪದಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಸುಮಾರು ಹತ್ತು ಸಾವಿರ ಚುಟುಕುಗಳನ್ನು ಬರೆದಿರುವ ದಿನಕರ ದೇಸಾಯಿಯವರು ಚುಟುಕುಗಳ ಮೂಲಕ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯ ಲೋಪದೋಷಗಳನ್ನು ಹೊರಹಾಕಿ ಸಮಾಜದ ಸುಧಾರಣೆಗೆ ಪ್ರಯತ್ನಿಸಿದ್ದಾರೆ ಇವರಿಗೆ ಚುಟುಕು ಬ್ರಹ್ನ ಎಂದುಕರೆಯಲಾಗುತ್ತಿದೆ.

ದಿನಕರ ದೇಸಾಯಿಯವರು 1967 ರಲ್ಲಿ ಲೋಕಸಭಾ ಚುನಾವಣೆಗೆ ಸಂಯುಕ್ತ ರಂಗದ ವತಿಯಿಂದ ಸ್ಪರ್ಧಿಸಿ ಲೋಕ ಸಭೆಗೆ ಕೆನರಾ ಕ್ಷೇತ್ರದಿಂದ ಆಯ್ಕೆಯಾಗುವುದರ ಮೂಲಕ ರಾಜಕೀಯ ಪ್ರವೇಶ ಮಾಡಿದರು ರಾಜಕೀಯ ಕ್ಷೇತ್ರದಲ್ಲಿ ಕೆಲವು ಜನಪ್ರತಿನಿಧಿಗಳು ಹಣವನ್ನು ಹೇಗೆ ಗಳಿಸುತ್ತಾರೆ ಎನ್ನುವುದಕ್ಕೆ ಅವರು ಬರೆದ ಚುಟುಕು ಈ ರೀತಿಯಾಗಿದೆ.

ಅಲಲ! ಕೇಳೋ ಮಗನೆ ಪೌರುಷದ ಸುದ್ದಿ
ಎಷ್ಟು ಮಂದಿಗೆ ಉಂಟು ಈ ತರದ ಬುದ್ದಿ..?
ಹತ್ತು ವರುಷದ ಹಿಂದೆ ಇತ್ತು ಲಂಗೋಟಿ
ಈ ಹೊತ್ತು ನೋಡಿದರೆ ಬರಿ ಹತ್ತು ಕೋಟಿ. ...

ಹೀಗೆ ತಮ್ಮ ಹರಿತವಾದ ಚುಟುಕುಗಳ ಮೂಲಕ ಚಾಟೀ ಬೀಸಿದ್ದಾರೆ.

ಇವರು ಲೋಕಸಭಾ ಸದಸ್ಯರಾದ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಅತೀ ಸಮರ್ಥವಾಗಿ ಪ್ರತಿನಿಧಿಸಿದರು. ದಿನಕರ ದೇಸಾಯಿಯವರ ಜನಸೇವಕದ ಮುಖಪುಟದ ಬರಹದಲ್ಲಿ ಸಂಪಾದಕೀಯದಲ್ಲಿ ತಮ್ಮ ಚಿಂತನಶೀಲತೆ, ಪರಿಪಕ್ವ ಆಲೋಚನೆ, ಪ್ರಬುದ್ಧ ಮನಸ್ಥಿತಿಯನ್ನು ವ್ಯಕ್ತಪಡಿಸಿದ್ದಾ ರೆ. ಅವರ ಆಳವಾದ ಆಲೋಚನಾ ಕ್ರಮ ಮತ್ತು ಆರೋಗ್ಯ ಪೂರ್ಣವಾದ ಧೋರಣೆಯ ಬರವಣಿಗೆ ಅವರ ಪತ್ರಿಕೊದ್ಯಮಕ್ಕೆ ವಿಶೇಷವಾದ ಮಹತ್ವವನ್ನು ತಂದುಕೊಟ್ಟಿದೆ. ಅಂಕೋಲೆಯಿಂದ ಜನ ಸೇವಕ ಕನ್ನಡ ವಾರ ಪತ್ರಿಕೆಯನ್ನು ಸುಮಾರು 17 ವರ್ಷಗಳ ಕಾಲ ಸಂಪಾದಕರಾಗಿ ಪ್ರಕಟಿಸಿದರು.

ದಿನಕರ ದೇಸಾಯಿ ಅವರು ಕವಿ, ಸಾಹಿತಿ, ವಿಮರ್ಶಕ, ಪತ್ರಕರ್ತ, ರಾಜಕಾರಣಿ ಹಾಗೂ ಸಮಾಜ ಸೇವಕರಾಗಿ ಸಲ್ಲಿಸಿದ ಸೇವೆ ಅಮೂಲ್ಯವಾಗಿದೆ. ಅವರು ನಿಜವಾಗಲೂ ವಿಶ್ರಾಂತಿ ಹೊಂದಿದ್ದು1982 ನವೆಂಬರ್ 9 ರಂದು ರಾತ್ರಿ 11.30ಕ್ಕೆ ದಿನಕರ ಎಂಬ ಸೂರ್ಯ ಅಸ್ತಂಗತನಾದರೂ ಆತನ ಚುಟುಕುಗಳೆಂಬ ಕಿರಣಗಳು ಸದಾ ಬೆಳಕನ್ನು ನೀಡುತ್ತಲೇ ಇವೆ.

ನಾನು ಸತ್ತಾಗ ನೀ ಅಳಬೇಡ ಕಂದ,
ನಾ ಬರೆದ ಕವಿತೆಗಳ ನೋಡು ಮುದದಿಂದ
ಈ ಕವಿತೆಯೊಳಗುಂಟು ದಿನಕರನ ಜೀವನ,
ಇರುಳು ಕವಿದಾಗಲೂ ಮೂಡಿರುವುದು ಭಾವ,

ದಿನಕರರು ತಮ್ಮ ಸಾವಿನ ಬಗ್ಗೆ ಜನಕ್ಕೆ ನೀಡಿದ ಸಾಂತ್ವನ ಇದು. ದಿನಕರರು ಇನ್ನಿಲ್ಲ ಎಂಬ ಕೊರಗಿಗೆ ಅವಕಾಶವೇ ಇಲ್ಲ. ಅವರು ತಮ್ಮ ಕವಿತೆಯ ಸಾಲುಗಳಲ್ಲಿ, ತಾವು ಕಟ್ಟಿದ ಶಿಕ್ಷಣ ಸಂಸ್ಥೆಗಳಲ್ಲಿ ಅವರು ಮಾಡಿದ ಸೇವೆಯಲ್ಲಿ ?ಲಜನತೆಯ ನೆನಪಿನಂಗಳದಲ್ಲಿ ಇನ್ನೂ ಜೀವಂತವಾಗಿದ್ದಾರೆ. ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸೋಣ.

ಬೀರಪ್ಪಶಂಭೋಜಿ,ಗೌರವಾಧ್ಯಕ್ಷರು, ರಾಯಚೂರು ಜಿಲ್ಲಾಚುಟುಕು ಸಾಹಿತ್ಯ ಪರಿಷತ್ತು,ಸಿಂಧನೂರು. ಸೆಪ್ಟೆಂಬರ್ 10 ರಂದು ಚುಟುಕು ಬ್ರಹ್ಮ ದಿನಕರ ದೇಸಾಯಿಯವರ ಜನ್ಮದಿನ ಪ್ರಯುಕ್ತ ಅವರ ಪರಿಚಯ ಲೇಖನ ಸರಕಾರಿ ಪ್ರೌಢ ಶಾಲೆ ತಿಡಿಗೋಳ ಗಣಿತ ಶಿಕ್ಷಕಿ ಶ್ರೀಮತಿ ನಾಗವೇಣಿ ಮಂಜುನಾಥ ಬಂಡಿ ಹರ್ಲಾಪುರ ಸ.ಪ್ರೌ.ಶಾಲೆಗೆ ವರ್ಗಾವಣೆ ಆದ ಪ್ರಯುಕ್ತ ತಿಡಿಗೋಳ ಶಾಲೆಯ ಮುಖ್ಯ ಗುರು ದಿನೇಶ, ಹಾಗೂ ಶಿಕ್ಷಕ ವೃಂದದವರು ಎಸ್.ಡಿ.ಎಮ್.ಸಿ.ಅಧ್ಯಕ್ಷ ಪಂಪಾಪತಿ ಕಾಸರಡ್ಡಿ. ನಿವೃತ್ತ ಮುಖ್ಯ ಶಿಕ್ಷಕ ಬೀರಪ್ಪ ಶಂಭೋಜಿ, ಮಾಜಿ ಪ್ರಭಾರಿ ಮುಖ್ಯ ಶಿಕ್ಷಕ ಗದ್ದೆಪ್ಪ ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಮೂಲಸೌಕರ್ಯ ಹಾಗೂ ಆಡಳಿತ ಸುಧಾರಣೆ: 'ಫ್ಯೂಚರ್ ರೆಡಿ' ನಗರಗಳ ನಿರ್ಮಾಣಕ್ಕೆ ಡಾ. ಯತೀಂದ್ರ ಸಿದ್ದರಾಮಯ್ಯ ಕರೆ

ನೈಜ್ಯ ದೆಸೆ ನ್ಯೂಸ್

**ತಾಂಡವಪುರ ಸೆಪ್ಟೆಂಬರ್ 9: ಭವಿಷ್ಯಕ್ಕೆ ಸಿದ್ಧ ನಗರಗಳ ನಿರ್ಮಾಣಕ್ಕೆಸಮಗ್ರದೃಷ್ಟಿಕೋನದಿಂದನಗರಾಭಿವೃದ್ಧಿಅಗತ್ಯ: ನಗರ ಆಡಳಿತ, ಮೂಲಸೌಕರ್ಯ, 24ಥ7 ನೀರು ಸರಬರಾಜು ಹಾಗೂ ಸುಸ್ಥಿರ ಸಾರಿಗೆಗೆ ಆದ್ಯತೆ ಸೇರದಂತೆ ಮೂರು ಸೌಕರ್ಯಗಳಿಗೆ ಹೆಚ್ಚು ಹೊತ್ತು ನೀಡುವುದಾಗಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ನಗರಾಭಿವೃದ್ಧಿ ಸಚಿವರಾದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ ರವರು ಹೇಳಿದರು**

ಕರ್ನಾಟಕ ರಾಜ್ಯ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ (KUIDFC) ಸಹಯೋಗದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯದ ನಗರ ಮೂಲಸೌಕರ್ಯ ಮತ್ತು ಹೂಡಿಕೆಗಳ ಶೃಂಗಸಭೆಯನ್ನು ನಗರಾಭಿವೃದ್ಧಿ ಸಚಿವರು ಉದ್ಘಾಟಿಸಿ, ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರು ಕರ್ನಾಟಕವು ದೇಶದಲ್ಲಿ ವೇಗವಾಗಿ ನಗರೀಕರಣಗೊಳ್ಳುತ್ತಿರುವ ಹಾಗೂ ಆರ್ಥಿಕವಾಗಿ ಅತ್ಯಂತ ಕ್ರಿಯಾಶೀಲ ರಾಜ್ಯಗಳಲ್ಲಿ ಒಂದಾಗಿದೆ.

ರಾಜ್ಯದ ನಗರಗಳು ಉದ್ಯಮ, ನಾವೀನ್ಯತೆ, ಶಿಕ್ಷಣ, ಉದ್ಯೋಗ ಮತ್ತು ಹೂಡಿಕೆಯ ಪ್ರಮುಖ ಕೇಂದ್ರಗಳಾಗಿ ವೇಗವಾಗಿ ಬೆಳೆಯುತ್ತಿವೆ. ಬೆಂಗಳೂರು ಜಾಗತಿಕ ತಂತ್ರಜ್ಞಾನ ಮತ್ತು ನಾವೀನ್ಯತೆಯ ಕೇಂದ್ರವಾಗಿ ಗುರುತಿಸಿಕೊಂಡಿರುವುದರ ಜೊತೆಗೆ, ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರಗಿ, ಶಿವಮೊಗ್ಗ ಹಾಗೂ ತುಮಕೂರು ಸೇರಿದಂತೆ ರಾಜ್ಯದ ವಿವಿಧ ನಗರಗಳು ಪ್ರಾದೇಶಿಕ ಆರ್ಥಿಕ ಬೆಳವಣಿಗೆಯ ಪ್ರಮುಖ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ ಎಂದು ಸಚಿವರು ತಿಳಿಸಿದರು. ವೇಗವಾಗಿ ನಡೆಯುತ್ತಿರುವ ನಗರೀಕರಣವು ಹೊಸ ಅವಕಾಶಗಳೊಂದಿಗೆ ದೊಡ್ಡ ಜವಾಬ್ದಾರಿಯನ್ನೂ ನಮ್ಮ ಮುಂದಿಟ್ಟಿದೆ.



ನಗರಗಳ ಬೆಳವಣಿಗೆ ಕೇವಲ ಭೌತಿಕ ವಿಸ್ತರಣೆಗೆ ಸೀಮಿತವಾಗದೆ, ಯೋಜಿತ, ಸಮಗ್ರ, ಸುಸ್ಥಿರ ಹಾಗೂ ಪ್ರತಿಯೊಬ್ಬ ನಾಗರಿಕನ ಜೀವನಮಟ್ಟವನ್ನು ಸುಧಾರಿಸುವ ರೀತಿಯಲ್ಲಿ ಸಾಗಬೇಕು. ಇದೇ ರಾಜ್ಯ ಸರ್ಕಾರದ ನಗರಾಭಿವೃದ್ಧಿ ಕಾರ್ಯಸೂಚಿಯ ಪ್ರಮುಖ ಆಶಯವಾಗಿದೆ ಎಂದು ಅವರು ಹೇಳಿದರು. ನಾಲ್ಕು ಪ್ರಮುಖ ಆಧಾರ ಸ್ತಂಭಗಳಿಗೆ ಆದ್ಯತೆ ರಾಜ್ಯದ ನಗರಾಭಿವೃದ್ಧಿಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರ ನಾಲ್ಕು ಪ್ರಮುಖ ಆಧಾರ ಸ್ತಂಭಗಳ ಮೇಲೆ ವಿಶೇಷ ಗಮನಹರಿಸುತ್ತಿದೆ ಎಂದು ಸಚಿವರು ತಿಳಿಸಿದರು.

ಬಲಿಷ್ಠ ನಗರ ಆಡಳಿತ ಮತ್ತು ಸಮಗ್ರ ನಗರ ಯೋಜನೆ – ಮೂಲಸೌಕರ್ಯ ಅಭಿವೃದ್ಧಿಗೆ ಪರಿಣಾಮಕಾರಿ ಹಣಕಾಸು ವ್ಯವಸ್ಥೆ ಹಾಗೂ ಯೋಜನೆಗಳ ಸಮರ್ಪಕ ಅನುಷ್ಠಾನ ಮಾಡುವ ಜೊತೆಗೆ –ಪ್ರತಿಯೊಬ್ಬರಿಗೂ ಸುರಕ್ಷಿತ, ವಿಶ್ವಾಸಾರ್ಹ ಹಾಗೂ ನಿರಂತರ 24ಥ7 ಕುಡಿಯುವ ನೀರು ಮತ್ತು ಒಳಚರಂಡಿ ಸೌಲಭ್ಯ –ಸುಸ್ಥಿರ, ಸಮಗ್ರ ಹಾಗೂ ಜನಕೇಂದ್ರಿತ ನಗರ ಸಾರಿಗೆ ವ್ಯವಸ್ಥೆ ನೀರು ಮತ್ತು ಒಳಚರಂಡಿ ಮೂಲಸೌಕರ್ಯಕ್ಕೆ ಒತ್ತು ನೀಡುವುದಾಗಿ ಸಚಿವರು ತಿಳಿಸಿದರು ಬೆಳಗಾವಿ, ಹುಬ್ಬಳ್ಳಿ–ಧಾರವಾಡ ಹಾಗೂ ಕಲಬುರಗಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ 24ಥ7 ನೀರು ಸರಬರಾಜು ಯೋಜನೆಗಳನ್ನು ವಿಸ್ತರಿಸುವುದು, ರಾಜ್ಯದ ವಿವಿಧ ನಗರಗಳಲ್ಲಿ ನೀರು ಮತ್ತು ಒಳಚರಂಡಿ ಮೂಲಸೌಕರ್ಯವನ್ನು ಬಲಪಡಿಸುವುದು ಹಾಗೂ ತ್ಯಾಜ್ಯನೀರಿನ ಸಂಸ್ಕರಣೆ ಮತ್ತು ಮರುಬಳಕೆಗೆ ಉತ್ತೇಜನ ನೀಡುವುದು ಸರ್ಕಾರದ ಪ್ರಮುಖ ಆದ್ಯತೆಗಳಾಗಿವೆ ಎಂದು ಸಚಿವರು ಹೇಳಿದರು. ನಗರಗಳ ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ನೀರಿನ ಸಂಪನ್ಮೂಲಗಳ ಸಮರ್ಥ ನಿರ್ವಹಣೆ ಹಾಗೂ ಸುಸ್ಥಿರ ನಗರ ಸೇವೆಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ತಿಳಿಸಿದ ಸಚಿವರು ಜನಕೇಂದ್ರಿತ ಮತ್ತು ಸುಸ್ಥಿರ ನಗರ ಸಾರಿಗೆ ನಗರಗಳಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಹಾಗೂ ಪ್ರಯಾಣದ ಅಗತ್ಯಗಳಿಗೆ ಪರಿಹಾರ ಕಂಡುಕೊಳ್ಳಲು ಸಾರ್ವಜನಿಕ ಸಾರಿಗೆಯನ್ನು ಮತ್ತಷ್ಟು ಬಲಪಡಿಸುವುದು, ಉಪನಗರ ರೈಲು ವ್ಯವಸ್ಥೆ, Transit-Oriented Development (TOD), ಪಾದಚಾರಿ ಮತ್ತು ಸೈಕಲ್ ಮೂಲಸೌಕರ್ಯ ಹಾಗೂ ತಂತ್ರಜ್ಞಾನ ಆಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ನಗರ ಸಾರಿಗೆ ವ್ಯವಸ್ಥೆ ವೇಗ, ಸುರಕ್ಷತೆ, ಸುಸ್ಥಿರತೆ ಮತ್ತು ಎಲ್ಲ ವರ್ಗದ ಜನರಿಗೆ ಸುಲಭವಾಗಿ ಲಭ್ಯವಾಗುವಂತಿರಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ ಎಂದರು.

ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸದೃಢತೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು ನಗರ ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಕ್ರೋಢೀಕರಿಸುವುದು ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸದೃಢತೆಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಸಚಿವರು ಹೇಳಿದರು. ಆಸ್ತಿ ತೆರಿಗೆ ಸಂಗ್ರಹಣೆಯ ಸುಧಾರಣೆ, ಉಖಖ ಆಧಾರಿತ ಆಸ್ತಿ ಮೌಲ್ಯಮಾಪನ, ಡಿಜಿಟಲ್ ನಗರ ಸೇವೆಗಳು ಹಾಗೂ ಮುನಿಸಿಪಲ್ ಬಾಂಡ್‌ಗಳಂತಹ ನವೀನ ಹಣಕಾಸು ವ್ಯವಸ್ಥೆಗಳ ಮೂಲಕ ನಗರಗಳಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಹೆಚ್ಚಿಸುವತ್ತ ಗಮನಹರಿಸಲಾಗುತ್ತಿದೆ ಎಂದರು.



ಆರ್ಥಿಕ ಬೆಳವಣಿಗೆ ಮತ್ತು ಉತ್ತಮ ಜೀವನಮಟ್ಟಕ್ಕೆ ಪೂರಕವಾದ ನಗರಗಳು "ನಮ್ಮ ಗುರಿ ಕೇವಲ ನಗರಗಳನ್ನು ವಿಸ್ತರಿಸುವುದಲ್ಲ. ಆರ್ಥಿಕ ಬೆಳವಣಿಗೆಗೆ ವೇಗ ನೀಡುವ, ಪರಿಸರವನ್ನು ಸಂರಕ್ಷಿಸುವ ಹಾಗೂ ಪ್ರತಿಯೊಬ್ಬ ನಾಗರಿಕನಿಗೂ ಉತ್ತಮ ಗುಣಮಟ್ಟದ ಜೀವನವನ್ನು ಒದಗಿಸುವ ಭವಿಷ್ಯಸಿದ್ಧ ನಗರಗಳನ್ನು ನಿರ್ಮಿಸುವುದಾಗಿದೆ, ಎಂದು ಸಚಿವರು ಹೇಳಿದರು.

ಕರ್ನಾಟಕದ ನಗರಗಳ ಬೆಳವಣಿಗೆಯನ್ನು ಮುಂದಿನ ಪೀಳಿಗೆಯ ಅಗತ್ಯಗಳಿಗೆ ತಕ್ಕಂತೆ ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕ ಮತ್ತು ಖಾಸಗಿ ವಲಯದ ಸಹಭಾಗಿತ್ವ, ನವೀನ ಹಣಕಾಸು ಮಾದರಿಗಳು ಹಾಗೂ ತಂತ್ರಜ್ಞಾನಗಳ ಪರಿಣಾಮಕಾರಿ ಬಳಕೆಯ ಮೂಲಕ ರಾಜ್ಯದ ನಗರ ಮೂಲಸೌಕರ್ಯವನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಏಗಿಖಆಈಅ ಅಧ್ಯಕ್ಷರಾದ ಶ್ರೀ ಎಸ್. ಎನ್. ನಾರಾಯಣಸ್ವಾಮಿ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಬಿಬಿ ಕಾವೇರಿ ಹಾಗೂ ಏಗಿಖಆಈಅ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಭೂಬಾಲನ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಮುಂತಾದವರು ಹಾಜರಿದ್ದರು

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101